ಕನ್ನಡ

# ಬಾಲಭಾರತಿ

ಎರಡನೆಯ ಇಯತ್ತೆ



# ಭಾರತದ ಸಂವಿಧಾನ

## ಭಾಗ 4 ಕ

## ನಾಗರಿಕರ ಮೂಲಭೂತ ಕರ್ತವ್ಯಗಳು

**ಅನುಚ್ಛೇದ 51 ಕ**

**ಮೂಲಭೂತ ಕರ್ತವ್ಯಗಳು- ಪ್ರತಿಯೊಬ್ಬ ಭಾರತೀಯ ನಾಗರಿಕನ ಈ ಕರ್ತವ್ಯಗಳು ಇರುತ್ತವೆಯೆಂದರೆ ಅವನು-**

(ಕ) ಪ್ರತಿಯೊಬ್ಬ ನಾಗರಿಕನು ಸಂವಿಧಾನವನ್ನು ಪಾಲಿಸಬೇಕು. ಸಂವಿಧಾನದಲ್ಲಿಯ ಆದರ್ಶಗಳು ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಗಳನ್ನು ಗೌರವಿಸಬೇಕು.

(ಖ) ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟಕ್ಕೆ ಸ್ಫೂರ್ತಿ ನೀಡಿದ ಆದರ್ಶಗಳನ್ನು ಪಾಲಿಸಬೇಕು.

(ಗ) ದೇಶದ ಸಾರ್ವಭೌಮತ್ವ, ಐಕ್ಯತೆ ಮತ್ತು ಸಮಗ್ರತೆಯನ್ನು ಸುರಕ್ಷಿತವಾಗಿಡುವ ಸಲುವಾಗಿ ಪ್ರಯತ್ನಶೀಲರಾಗಿರಬೇಕು.

(ಘ) ನಮ್ಮ ದೇಶದ ರಕ್ಷಣೆ ಮಾಡಬೇಕು. ದೇಶದ ಸೇವೆ ಮಾಡಬೇಕು.

(ಙ) ಎಲ್ಲ ಪ್ರಕಾರದ ಭೇದಭಾವಗಳನ್ನು ಮರೆತು ಒಗ್ಗಟ್ಟನ್ನು ಬೆಳೆಸಬೇಕು ಹಾಗೂ ಸಹೋದರ ಭಾವನೆಯನ್ನು ಉತ್ತೇಜಿಸಬೇಕು. ಸ್ತ್ರೀಯರ ಗೌರವಕ್ಕೆ ಚ್ಯುತಿ ತರುವಂತಹ ರೂಢಿಗಳನ್ನು ತ್ಯಜಿಸಬೇಕು.

(ಚ) ನಮ್ಮ ಸಮ್ಮಿಶ್ರ ಸಂಸ್ಕೃತಿಯ ಪರಂಪರೆಯನ್ನು ಕಾಪಾಡಬೇಕು.

(ಛ) ನೈಸರ್ಗಿಕ ಪರಿಸರವನ್ನು ಸಂರಕ್ಷಿಸಬೇಕು. ಸಜೀವ ಪ್ರಾಣಿಗಳ ಮೇಲೆ ದಯೆ ತೋರಿಸಿರಿ.

(ಜ) ವೈಜ್ಞಾನಿಕ ಮನೋಭಾವನೆ, ಮಾನವೀಯತೆ ಮತ್ತು ಜಿಜ್ಞಾಸು ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು.

(ಝ) ಸಾರ್ವಜನಿಕ ಆಸ್ತಿ-ಪಾಸ್ತಿಗಳನ್ನು ರಕ್ಷಿಸಬೇಕು. ಹಿಂಸಾಚಾರವನ್ನು ತ್ಯಜಿಸಬೇಕು.

(ಞ) ರಾಷ್ಟ್ರದ ಉತ್ತರೋತ್ತರ ಪ್ರಗತಿಯನ್ನು ಸಾಧಿಸಲು ವೈಯಕ್ತಿಕ ಹಾಗೂ ಸಾಮೂಹಿಕ ಚಟುವಟಿಕೆಗಳಲ್ಲಿ ಭಾಗವಹಿಸಬೇಕು.

(ಟ) 6 ರಿಂದ 14 ವರ್ಷ ವಯೋಮಾನದಲ್ಲಿಯ ತಮ್ಮ ಮಕ್ಕಳಿಗೆ ಪೋಷಕರು ಶಿಕ್ಷಣದ ಅವಕಾಶಗಳನ್ನು ಕಲ್ಪಿಸಿಕೊಡಬೇಕು.

ಸರಕಾರ ನಿರ್ಣಯ ಕ್ರಮಾಂಕ: ಅಭ್ಯಾಸ-2116 (ಪ್ರ.ಕ್ರ. 43/16) ಎಸ್.ಡಿ-4 ದಿನಾಂಕ: 25.4.2016 ಅನ್ವಯ ಸ್ಥಾಪಿಸಲಾದ ಸಮನ್ವಯ ಸಮಿತಿಯ ದಿನಾಂಕ 19.3.2019 ರಂದು ನಡೆದ ಸಭೆಯಲ್ಲಿ ಈಪಠ್ಯಪುಸ್ತಕವನ್ನು ಇ.ಸ. 2019-20 ಈ ಶೈಕ್ಷಣಿಕ ವರ್ಷದಿಂದ ನಿರ್ಧರಿಸಲು ಮಾನ್ಯತೆ ನೀಡಲಾಗಿದೆ.

# ಕನ್ನಡ

# ಬಾಲಭಾರತಿ

## ಎರಡನೆಯ ಇಯತ್ತೆ

ಹೆಸರು: ______________________

ಶಾಲೆ: ______________________

ಇಯತ್ತೆ: ____________ ವಿಭಾಗ: ________

ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ - 411004.

ATZ3LS

ತಮ್ಮ ಸ್ಮಾರ್ಟಫೋನದ ಮೇಲೆ DIKSHA App ಮೂಲಕ ಪಠ್ಯಪುಸ್ತಕದ ಈ ಪುಟದ ಮೇಲಿನ Q.R. Code ಡಿಜಿಟಲ ಪಠ್ಯಪುಸ್ತಕದ ಮೂಲಕ ಆ ಪಾಠಕ್ಕೆ ಸಂಬಂಧಿಸಿದಂತೆ ಅಧ್ಯಯನ-ಅಧ್ಯಾಪನದ ಸಲುವಾಗಿ ಉಪಯುಕ್ತ ದೃಕ್-ಶ್ರಾವ್ಯ ಸಾಹಿತ್ಯ ಉಪಲಬ್ಧವಾಗುವುದು.

ಪ್ರಥಮಾವೃತ್ತಿ – 2019
ಪುನರ್ಮುದ್ರಣ – 2022

© ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ 411004.
ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಹಾಗೂ ಅಭ್ಯಾಸಕ್ರಮ ಸಂಶೋಧನ ಮಂಡಳವು ಈ ಪುಸ್ತಕದ ಎಲ್ಲ ಹಕ್ಕುಗಳನ್ನು ಕಾಯ್ದಿರಿಸಿದೆ. ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಹಾಗೂ ಅಭ್ಯಾಸಕ್ರಮ ಸಂಶೋಧನ ಮಂಡಳದ ಸಂಚಾಲಕರ ಲಿಖಿತ ಅನುಮತಿ ಇಲ್ಲದೆ ಈ ಪುಸ್ತಕದ ಯಾವುದೇ ಭಾಗವನ್ನು ಉದ್ಧೃತಗೊಳಿಸಬಾರದು.

**ಕನ್ನಡ ಭಾಷಾ ಸಮಿತಿ**

ಶ್ರೀಮತಿ ಮೀನಾಕ್ಷಿ ಹನಗಂಡಿ
ಶ್ರೀ ಮಲ್ಲಿನಾಥ ಮಣೂರೆ
ಶ್ರೀ ಮಹಾದೇವ ಜಾವೀರ
ಶ್ರೀ ದಯಾನಂದ ಹಂಜಗಿ
ಶ್ರೀಮತಿ ಸುವರ್ಣಾ ದೀಕ್ಷಿತ
ಡಾ. ಸದಾನಂದ ಎಂ. ಬಿಳ್ಳೂರ, ಸದಸ್ಯ-ಸಚಿವ

**ಅಭ್ಯಾಸಗಟ ಸದಸ್ಯರು**

ಶ್ರೀ ನೀಲಪ್ಪಾ ಕವಟಗಿ
ಶ್ರೀ ಮಾರುತಿ ದಾಸನಟ್ಟಿ
ಶ್ರೀಮತಿ ಕುಸುಮ ಕೆಂಜಲಕರ

**ಮುಖಪುಟ:** ಶ್ರೀ. ರಾಜೇಂದ್ರ ಗಿರಧಾರಿ
**ಚಿತ್ರಕಾರ:** ಶ್ರೀ. ವಾಸುದೇವ ದೇವರಕೊಂಡಾ
**ಅಕ್ಷರಜೋಡಣೆ:** ಶ್ರೀ. ನರೇಂದ್ರ ಅಚ್ಯುತ ಕುಳಕರ್ಣಿ
ಶ್ರೀ. ಅಶೋಕ ವಾಮನ ಸವದತ್ತಿ

**ಕನ್ನಡ ಸಂಯೋಜನ ಪ್ರಮುಖರು**

**ಡಾ. ಸದಾನಂದ ಎಂ. ಬಿಳ್ಳೂರ**
ವಿಶೇಷಾಧಿಕಾರಿ

**ಶ್ರೀ ಆರ್. ಎಮ್. ಗಣಾಚಾರಿ**
ಸಹಾಯಕ ವಿಶೇಷಾಧಿಕಾರಿ

**ಕಾಗದ**

70 ಜಿ.ಎಸ್.ಎಮ್. ಕ್ರೀಮವೋವ್ಹ

**ಮುದ್ರಣಾದೇಶ**

N/PB/2022-23/2,000

**ಮುದ್ರಕ**

M/S. RENUKA BINDERS, PUNE

**ನಿರ್ಮಿತಿ**

**ಶ್ರೀ. ಸಚ್ಚಿತಾನಂದ ಆಫಳೆ**
ಮುಖ್ಯ ನಿರ್ಮಿತಿ ಅಧಿಕಾರಿ

**ಶ್ರೀ. ಸಚಿನ ಮೆಹತಾ**
ನಿರ್ಮಿತಿ ಅಧಿಕಾರಿ

**ಶ್ರೀ. ನಿತಿನ ವಾಣಿ**
ಸಹಾಯಕ ನಿರ್ಮಿತಿ ಅಧಿಕಾರಿ

**ಪ್ರಕಾಶಕ**

**ಶ್ರೀ ವಿವೇಕ ಉತ್ತಮ ಗೋಸಾವಿ**
ನಿಯಂತ್ರಕ,
ಪಾಠ್ಯಪುಸ್ತಕ ನಿರ್ಮಿತಿ ಮಂಡಳ,
ಪ್ರಭಾದೇವಿ, ಮುಂಬಯಿ – 25

# ಭಾರತದ ಸಂವಿಧಾನ

## ಪೀಠಿಕೆ

**ಭಾರತದ ಪ್ರಜೆಗಳಾದ ನಾವು, ಭಾರತವನ್ನು ಒಂದು ಸಾರ್ವಭೌಮ**
**ಸಮಾಜವಾದಿ ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ** ನಿರ್ಮಿಸಲು
ಹಾಗೂ ಅದರ ಸಮಸ್ತ ನಾಗರಿಕರಿಗೆ :

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ;**
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಶ್ರದ್ಧೆ
ಮತ್ತು ಉಪಾಸನಾ **ಸ್ವಾತಂತ್ರ್ಯ;**
ಸ್ಥಾನಮಾನ ಹಾಗೂ ಅವಕಾಶ **ಸಮಾನತೆಯು;**

ನಿಶ್ಚಿತವಾಗಿ ದೊರೆಯುವಂತೆ ಮಾಡಲು
ಮತ್ತು ವ್ಯಕ್ತಿಗೌರವವನ್ನು
ಹಾಗೂ ರಾಷ್ಟ್ರದ ಐಕ್ಯತೆ ಮತ್ತು ಏಕಾತ್ಮತೆಯನ್ನು
ಆಶ್ವಾಸನೆ ನೀಡುವ **ಬಂಧುತ್ವವನ್ನು**
ವೃದ್ಧಿಗೊಳಿಸಲು ದೃಢಸಂಕಲ್ಪದ ನಿರ್ಧಾರ ಮಾಡಿ ;

**ನಮ್ಮ ಸಂವಿಧಾನ ಸಭೆಯಲ್ಲಿ**
ಇಂದು ದಿನಾಂಕ ಇಪ್ಪತ್ತಾರನೆಯ ನವ್ಹೆಂಬರ, ೧೯೪೯ ನೆಯ ಇಸವಿ
**ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ ಮತ್ತು ಅಧಿನಿಯಮಿತ**
**ಗೊಳಿಸಿ ಸ್ವತ: ಅರ್ಪಿಸಿಕೊಂಡಿದ್ದೇವೆ.**

## ರಾಷ್ಟ್ರಗೀತೆ

ಜನಗಣಮನ-ಅಧಿನಾಯಕ ಜಯ ಹೇ
ಭಾರತ-ಭಾಗ್ಯವಿಧಾತಾ ।

ಪಂಜಾಬ, ಸಿಂಧು, ಗುಜರಾತ, ಮರಾಠಾ,
ದ್ರಾವಿಡ, ಉತ್ಕಲ, ಬಂಗ,

ವಿಂಧ್ಯ, ಹಿಮಾಚಲ, ಯಮುನಾ, ಗಂಗಾ,
ಉಚ್ಛಲ ಜಲಧಿತರಂಗ,

ತವ ಶುಭ ನಾಮೇ ಜಾಗೇ, ತವ ಶುಭ ಆಶಿಸ ಮಾಗೇ,
ಗಾಹೇ ತವ ಜಯಗಾಥಾ,

ಜನಗಣ ಮಂಗಲದಾಯಕ ಜಯ ಹೇ,
ಭಾರತ-ಭಾಗ್ಯವಿಧಾತಾ ।

ಜಯ ಹೇ, ಜಯ ಹೇ, ಜಯ ಹೇ,
ಜಯ ಜಯ ಜಯ, ಜಯ ಹೇ ॥

## ಪ್ರತಿಜ್ಞೆ

ಭಾರತ ನನ್ನ ದೇಶ. ಭಾರತೀಯರೆಲ್ಲರೂ ನನ್ನ ಬಂಧು-ಭಗಿನಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ನನಗೆ ನನ್ನ ದೇಶದ ಸಮೃದ್ಧವಾದ ಹಾಗೂ ಬಹುವಿಧವಾದ ಪರಂಪರೆಯ ಬಗ್ಗೆ ಅಭಿಮಾನವಿದೆ. ಈ ಪರಂಪರೆಗೆ ತಕ್ಕವನಾಗಿರಲು ನಾನು ಯಾವಾಗಲೂ ಪ್ರಯತ್ನಿಸುತ್ತೇನೆ.

ನಾನು ನನ್ನ ತಾಯಿ-ತಂದೆ, ಗುರು-ಹಿರಿಯರನ್ನು ಆದರಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ನಡೆದುಕೊಳ್ಳುತ್ತೇನೆ.

ನಾನು ನನ್ನ ದೇಶ ಹಾಗೂ ನನ್ನ ದೇಶ ಬಾಂಧವರಲ್ಲಿ ನಿಷ್ಠೆ ಇಡುವೆನೆಂದು ಪ್ರತಿಜ್ಞೆ ಮಾಡುತ್ತೇನೆ. ಅವರ ಕಲ್ಯಾಣ ಹಾಗೂ ಉತ್ಕರ್ಷ ಇವುಗಳಲ್ಲಿಯೇ ನನ್ನ ಸುಖವುಂಟು.

# ಪ್ರಸ್ತಾವನೆ

ಪ್ರಿಯ ವಿದ್ಯಾರ್ಥಿ ಗೆಳೆಯರೆ,

ನೀವು ಈಗ ಎರಡನೆಯ ಇಯತ್ತೆಯಲ್ಲಿ ಬಂದಿದ್ದೀರಿ. ನಿಮಗೆ ಮನ:ಪೂರ್ವಕ ಸ್ವಾಗತ. ಎರಡನೆಯ ಇಯತ್ತೆಯ ಕನ್ನಡ ಬಾಲಭಾರತಿ ಈ ಪಠ್ಯಪುಸ್ತಕವನ್ನು ನಿಮ್ಮ ಕೈಗಿಡಲು ಬಹಳಷ್ಟು ಆನಂದವಾಗುತ್ತಿದೆ.

ನೀವು ಒಂದನೆಯ ಇಯತ್ತೆಯಲ್ಲಿ ಓದಲು, ಬರೆಯಲು, ಹಾಡಲು ಕಲಿತಿರುವಿರಿ. ಎರಡನೆಯ ಇಯತ್ತೆಯಲ್ಲಿ ನಿಮ್ಮಶಿಕ್ಷಣದ ದೃಢೀಕರಣ ಮಾಡಲು ಈ ಪಠ್ಯಪುಸ್ತಕದಲ್ಲಿ ಅನೇಕ ಮೋಜಿನ ಕೃತಿಗಳನ್ನು ಕೊಡಲಾಗಿದೆ. ಅದೇ ರೀತಿ ಅದು ಹೀಗೇಕೆ? ಇದು ಹೀಗೇಕೇ? ಎಂಬ ಕುತೂಹಲಕಾರಿ ಪ್ರಶ್ನೆಗಳಿಗೆ ಉತ್ತರಿಸಲು ಅವಕಾಶ ಮಾಡಿ ಕೊಡಲಾಗಿದೆ.

ಈ ಪಠ್ಯಪುಸ್ತಕದಲ್ಲಿ ಹಾಡುಗಳಿವೆ. ಅವುಗಳನ್ನು ಸಾಮೂಹಿಕವಾಗಿ ಹೇಳುವಾಗ ನಿಮಗೆ ಬಹಳ ಆನಂದ ಉಂಟಾಗುವುದು. ಅದರಂತೆ ಈ ಪಠ್ಯಪುಸ್ತಕದಲ್ಲಿ ಕಥೆಗಳನ್ನೂ ಕೂಡ ಅಳವಡಿಸಲಾಗಿದೆ. ಈ ಕಥೆಗಳನ್ನು ಕೇಳುವಾಗ ನಿಮಗೆ ಬಹಳಷ್ಟು ಖುಷಿಯಾಗುವುದು. ಚಿತ್ರಗಳಸಹಾಯದಿಂದ ಕಥೆಗಳನ್ನು ರಚಿಸಿ ನಿಮ್ಮ ಮಿತ್ರರಿಗೆ ಹೇಳುವಲ್ಲಿ ನೀವು ಮಗ್ನರಾಗುವಿರಿ. ಈ ಪಠ್ಯದಲ್ಲಿಯ ಚಿತ್ರಗಳನ್ನು ಕುರಿತು ನೀವು ಹರಟೆಹೊಡೆಯುವುದು, ನಿಮ್ಮ ಅನುಭವಗಳನ್ನು ಇತರರೊಂದಿಗೆ ಹಂಚಿಕೊಳ್ಳುವುದನ್ನು ಕಂಡರೆ ಎಲ್ಲರಿಗೂ ಮೋಜು ಉಂಟಾಗುವುದು.

ಭಾಷೆಯಲ್ಲಿಯ ಅಕ್ಷರ, ಶಬ್ದಗಳನ್ನು ಕಲಿಯಲು ನಿಮಗೆ ಇಷ್ಟವಾಗುವ ಬಣ್ಣ-ಬಣ್ಣದ ಚಿತ್ರಗಳನ್ನು ಕೊಡಲಾಗಿದೆ. ಆರಂಭದಲ್ಲಿ ಚಿತ್ರಗಳ ಸಹಾಯದಿಂದ ಅಕ್ಷರ ಮತ್ತು ಶಬ್ದಗಳನ್ನು ಕಲಿಯುವಾಗ ನಿಮಗೆ ನಿಶ್ಚಿತವಾಗಿ ಆನಂದ ಉಂಟಾಗುವುದು. ಇಲ್ಲಿ ಭಾಷೆಯ ದೃಢೀಕರಣದ ಸಲುವಾಗಿ ಕೆಲವು ಶಬ್ದಗಳ ಆಟಗಳನ್ನು ಕೊಡಲಾಗಿದೆ. ಈ ಆಟಗಳನ್ನು ಆಡುತ್ತ, ಆಡುತ್ತ ಭಾಷೆಯನ್ನು ಕಲಿಯಬಹುದು. ಶಬ್ದ, ವಾಕ್ಯಗಳನ್ನು ಓದುತ್ತ, ಓದುತ್ತ ನಗುತ್ತ ನಲಿಯುತ್ತ ಹೊಸ ಪಾಠಗಳನ್ನು ಕಲಿಯುವಿರಿ. ಈ ಎಲ್ಲ ಸಂಗತಿಗಳಿಂದ ನೀವು ಸ್ವಂತ ಕಲಿಯುವಿಕೆಯ ಆನಂದವನ್ನು ಅನುಭವಿಸುವಿರಿ. ಈ ಪಠ್ಯಪುಸ್ತಕದಲ್ಲಿಯ ಹಾಡು, ಕಥೆ, ಅಕ್ಷರಗುಂಪು, ಚಿತ್ರವಾಚನ ಮತ್ತು ಇತರ ಕೃತಿಗಳಿಗಾಗಿ ಕ್ಯೂ.ಆರ್. ಕೋಡ ಮೂಲಕ ದೃಕ್-ಶ್ರಾವ್ಯ ಸಾಹಿತ್ಯ ನಿಮಗೆ ಉಪಲಬ್ಧವಾಗಬಹುದು. ಮೊದಲನೆಯ ಪುಟದ ಮೇಲೆ ಕ್ಯೂಆರ್ ಕೋಡ್ ಕೊಡಲಾಗಿದೆ. ಕ್ಯೂಆರ್ ಕೋಡ್ ಮೂಲಕ ದೊರಕಿಸಿಕೊಂಡ ಮಾಹಿತಿ ನಿಮಗೆ ಬಹಳ ಇಷ್ಟವಾಗಬಹುದು.

ಎರಡನೆಯ ಇಯತ್ತೆಯು ಮುಗಿಯುತ್ತಿರುವಂತೆಯೇ ನೀವು ಚೆನ್ನಾಗಿ ಮಾತನಾಡಲು ಸಮರ್ಥರಾಗುವಿರಿ. ಮಿತ್ರರೆ, ಆನಂದದಿಂದ ಕಲಿಯುತ್ತ ಕಲಿಯುತ್ತ ಮುನ್ನಡೆಯುವಿರಿ. ಅದಕ್ಕಾಗಿ ನಿಮಗೆ ಶುಭಾಶಯಗಳು!

(ಡಾ. ಸುನಿಲ ಮಗರ)
ಸಂಚಾಲಕ
ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು
ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ - 4

ಪುಣೆ
ದಿನಾಂಕ: 6 ಎಪ್ರಿಲ 2019, ಯುಗಾದಿ
ಭಾರತೀಯ ಸೌರ ದಿನಾಂಕ : 16 ಚೈತ್ರ 1941

## ಕನ್ನಡ ಎರಡನೆಯ ಇಯತ್ತೆ – ಅಧ್ಯಯನ ನಿಷ್ಪತ್ತಿಗಳು

| ಅಧ್ಯಯನದಲ್ಲಿ ಸೂಚಿಸಿದ ಶೈಕ್ಷಣಿಕ ಪ್ರಕ್ರಿಯೆಗಳು | ಅಧ್ಯಯನ ನಿಷ್ಪತ್ತಿ |
|---|---|
| **ಎಲ್ಲ ವಿದ್ಯಾರ್ಥಿಗಳಿಗೆ (ಬೇರೆ ರೂಪದಲ್ಲಿ ಸಕ್ಷಮ ಮಕ್ಕಳು ಸಹಿತ) ವೈಯಕ್ತಿಕ ಅಥವಾ ಸಾಮೂಹಿಕ ಸ್ವರೂಪದಲ್ಲಿ ಪ್ರೋತ್ಸಾಹನೆ ನೀಡಬೇಕು. ಕಾರಣ ಅವರಿಗೆ –**<br>• ತಮ್ಮ ಭಾಷೆಯಲ್ಲಿ ಮಾತನಾಡಲು, ಚರ್ಚೆ ಮಾಡಲು ಸಾಕಷ್ಟು ಅವಕಾಶ ಕೊಡಬೇಕು.<br>• ಕನ್ನಡದಲ್ಲಿ ಕೇಳಿದ ಕಥೆ, ಕವಿತೆ, ಹಾಡು ಇತ್ಯಾದಿ, ತಮ್ಮ ಪದ್ಧತಿಯಿಂದ ಮತ್ತು ತಮ್ಮ ಭಾಷೆಯಲ್ಲಿ ಹೇಳುವ/ಪ್ರಶ್ನೆಗಳನ್ನು ಕೇಳುವ, ಆದರಂತೆ ತಮ್ಮ ವಿಚಾರಗಳನ್ನು ವ್ಯಕ್ತಪಡಿಸುವ ಅವಕಾಶ ಕೊಡಬೇಕು.<br>• ಮಕ್ಕಳಿಂದ ಅವರ ಭಾಷೆಯಲ್ಲಿ ಮಾತಾಡುವ ಸಂಗತಿಗಳನ್ನು ಕನ್ನಡ ಭಾಷೆಯಲ್ಲಿ ಮತ್ತು ಇತರ ಭಾಷೆಗಳಲ್ಲಿ (ವರ್ಗದಲ್ಲಿ ಉಪಯೋಗಿಸುವ ಭಾಷೆ ಅಥವಾ ವರ್ಗದಲ್ಲಿ ಮಕ್ಕಳು ಮಾತಾಡುವ ಭಾಷೆಯಲ್ಲಿ) ಪುನಃ ಮಾತಾಡಲು ಅವಕಾಶ ನೀಡಬೇಕು. ಆದರಿಂದ ಆ ಭಾಷೆಗಳಿಗೆ ವರ್ಗದಲ್ಲಿ ಯೋಗ್ಯ ಸ್ಥಾನ ದೊರೆಯುವುದು. ಮತ್ತು ಮಕ್ಕಳ ಶಬ್ದಸಂಪತ್ತು, ಅಭಿವ್ಯಕ್ತಿಯ ವಿಕಾಸಕ್ಕೆ ಅವಕಾಶ ದೊರೆಯುವುದು.<br>• ವಾಚನಕಟ್ಟೆಯ/ವಾಚನಾಲಯದ ಮುಖಾಂತರ ಮಕ್ಕಳಿಗೆ ಸ್ತರಗಳನುಸಾರ ಬೇರೆ ಬೇರೆ ಭಾಷೆಗಳ (ಮಕ್ಕಳ ಸ್ವಂತದ ಭಾಷೆ/ಇತರ ಭಾಷೆಯಲ್ಲಿಯ) ಮನೋರಂಜಕ ಸಾಹಿತ್ಯ ಉದಾ : ಮಕ್ಕಳಸಾಹಿತ್ಯ, ಮಕ್ಕಳಪತ್ರಿಕೆ, ದೃಕ್-ಶ್ರಾವ್ಯ ಸಾಹಿತ್ಯ ಉಪಲಬ್ಧಮಾಡಿ ಕೊಡಬೇಕು.<br>• ಚಿತ್ರಗಳ ಆಧಾರದಿಂದ ಅನುಮಾನ ತೆಗೆದು ಬೇರೆ-ಬೇರೆ ಕಥೆ, ಕವಿತೆ ಅಭ್ಯಸಿಸಲು ಅವಕಾಶ ಉಪಲಬ್ದಮಾಡಿ ಕೊಡಬೇಕು.<br>• ವಿವಿಧ ಉದ್ದೇಶಗಳನ್ನು ಗಮನದಲ್ಲಿರಿಸಿಕೊಂಡು, ವಿವಿಧ ಸಂಗತಿಗಳಿಗೆ ಯೋಗ್ಯ ಸ್ಥಾನ ನೀಡುವ ಅವಕಾಶವಿರಬೇಕು. ಉದಾ : ಯಾವದೊಂದು ಕಥೆಯಲ್ಲಿ ಯಾವುದೇ ಒಂದು ಮಾಹಿತಿಯ ಶೋಧ ಮಾಡುವುದು, ಕಥೆಯಲ್ಲಿ ನಡೆದ ವಿವಿಧ ಘಟನೆಗಳ ಯೋಗ್ಯ ಕ್ರಮ ಹಚ್ಚುವ್ವದು. ಈ ಘಟನೆ ಹೀಗೇಕೆ ಆಯಿತು? ಎಂದು ತರ್ಕ ಮಾಡುವದು; ಯಾವ ಪಾತ್ರಗಳು ಹಿಡಿಸಿದವು, ಯಾವ ಪಾತ್ರಗಳು ಹಿಡಿಸಲಿಲ್ಲ ಇತ್ಯಾದಿ ಹೇಳುವದು. | **ಅಧ್ಯಯನಾರ್ಥಿ**<br>02.06.01 ವಿವಿಧ ಉದ್ದೇಶಗಳಿಗಾಗಿ ಸ್ವಂತದ ಭಾಷೆ ಅಥವಾ/ಮತ್ತು ಶಾಲೆಯಲ್ಲಿಯ ಮಾಧ್ಯಮದ ಭಾಷೆಯನ್ನು ಬಳಸಿ ಹರಟೆ ಹೊಡೆಯುವವನು. ಉದಾ : ಮಾಹಿತಿ, ಸ್ವಂತದ ಅನುಭವಗಳನ್ನು ಹೇಳುವವನು, ಅಂದಾಜು ವ್ಯಕ್ತಪಡಿಸುವವನು.<br>02.06.02 ಹರಟೆ, ಕಥೆ, ಕವಿತೆ ಇತ್ಯಾದಿ ಗಮನವಿಟ್ಟು ಆಲಿಸುವವನು, ಸ್ವಂತದ ಭಾಷೆಯಲ್ಲಿ ಹೇಳುವವನು.<br>02.06.03 ನೋಡಿದ, ಆಲಿಸಿದ ಸಂಗತಿ, ಕವಿತೆ ಇತ್ಯಾದಿಗಳ ಬಗ್ಗೆ ಹರಟೆ ಹೊಡೆಯುವವನು ಮತ್ತು ತಮ್ಮ ಅಭಿಪ್ರಾಯ ವ್ಯಕ್ತಪಡಿಸುವವನು.<br>02.06.04 ತನ್ನ ಸುತ್ತಮುತ್ತಲಿನಲ್ಲಿ ನಡೆಯುವ ಘಟನೆಗಳು ಹಾಗೂ ಆಲಿಸಿದ ಸಂಗತಿಗಳು ಇವುಗಳೊಂದಿಗೆ ಸಂಬಂಧ ಜೋಡಿಸಿ ಹರಟೆ ಹೊಡೆಯುವವನು. ಉದಾ :ಕಥೆ, ಕವಿತೆ, ಪೋಸ್ಟರ ಜಾಹೀರಾತು ಇತ್ಯಾದಿ.<br>02.06.05 ಶಬ್ದ ಹಾಗೂ ಧ್ವನಿಗಳ ಉಚ್ಚಾರಗಳ ಆನಂದ ಪಡೆಯುತ್ತ ಲಯ ಮತ್ತು ತಾಲಗಳು ಇರುವ ಶಬ್ದಗಳನ್ನು ತಯಾರಿಸುವವನು, ಉದಾ : ಅಡ್ಡಗ್ವಾಡಿ ಮ್ಯಾಲ ಗಿಡ್ಡ ಬಾಳಿಕಾಯಿ.<br>02.06.06 ಸ್ವಂತದ ಕಲ್ಪನೆಯಿಂದ ಕಥೆ, ಕವಿತೆ ಇತ್ಯಾದಿಗಳನ್ನು ಹೇಳುವವನು ಹಾಗೂ ಅವುಗಳನ್ನು ವೃದ್ಧಿಗೊಳಿಸುವವನು.<br>02.06.07 ತನ್ನ ಸ್ತರ ಹಾಗೂ ಆಸಕ್ತಿಯನುಸಾರ ಕಥೆ, ಕವಿತೆ ಚಿತ್ರ ಪೋಸ್ಟರ ಇತ್ಯಾದಿಗಳನ್ನು ಆನಂದದಿಂದ ಓದಿ, ಅವುಗಳ, ಬಗ್ಗೆ ಅಭಿಪ್ರಾಯ ನೀಡುವನು, ಪ್ರಶ್ನೆಗಳನ್ನು ಕೇಳುವವನು.<br>02.06.08 ಚಿತ್ರದಲ್ಲಿಯ ಸೂಕ್ಷ್ಮ ದೃಶ್ಯಗಳನ್ನು ಸೂಕ್ಷ್ಮವಾಗಿ ನಿರೀಕ್ಷಿಸಿವನು.<br>02.06.09 ಚಿತ್ರದಲ್ಲಿಯ ಅಥವಾ ಚಿತ್ರಮಾಲಿಕೆಗಳಲ್ಲಿಯ ನಡೆದ ಘಟನೆ ಕೃತಿ ಮತ್ತು ಪಾತ್ರ ಇತ್ಯಾದಿಗಳನ್ನು ಏಕಕಾಲಕ್ಕೆ ತಿಳಿದುಕೊಂಡು ಆನಂದ ಪಡೆಯುವನು. |

## ಪಠ್ಯಪುಸ್ತಕದಲ್ಲಿ ಏನಿದೆ? ತಿಳಿಯೋಣ

ಎರಡನೆಯ ಇಯತ್ತೆಯ 'ಕನ್ನಡ ಬಾಲಭಾರತಿ' ಈ ಪಠ್ಯಪುಸ್ತಕ ವಿದ್ಯಾರ್ಥಿಗಳ ಪೂರ್ವಜ್ಞಾನದ ಆಧಾರವನ್ನು ಇಟ್ಟುಕೊಂಡು ಸಿದ್ಧಪಡಿಸಲಾಗಿದೆ. ಭಾಷೆಯಲ್ಲಿಯ ಹೊಸ ಹೊಸ ಬದಲಾವಣೆ, ವಿದ್ಯಾರ್ಥಿಗಳ ಪೂರ್ವಜ್ಞಾನ - ಮನೆ, ಕುಟುಂಬ ಮತ್ತು ಪರಿಸರದಲ್ಲಿಯ ವಿಷಯಗಳನ್ನು ಆಧರಿಸಿ ಶ್ರವಣ, ಭಾಷಣ - ಸಂಭಾಷಣ, ವಾಚನ ಮತ್ತು ಲೇಖನ ಈ ಭಾಷಾ ಕೌಶಲ್ಯಗಳ ಜೊತೆಗೆ ಆಕಲನ, ನಿರೀಕ್ಷಣೆ, ಕೃತಿ, ಉಪಕ್ರಮಗಳ ಮೇಲೆ ಹೆಚ್ಚಿನ ಒತ್ತು ಕೊಡಲಾಗಿದೆ. ಪಠ್ಯಪುಸ್ತಕದಲ್ಲಿ ಅಳವಡಿಸಲಾಗಿರುವ ಶಿಶುಗೀತೆ, ಕವಿತೆ, ಸಂವಾದ ಕಥೆ ಮತ್ತು ಇತರ ವಾಚನ ಪಾಠಗಳು ಮಕ್ಕಳನ್ನು ರಂಜಿಸುತ್ತವೆ. ಆಕರ್ಷಕ ಹಾಗೂ ಸರಳ ಭಾಷೆಯಲ್ಲಿ ಅವುಗಳನ್ನು ಪ್ರಸ್ತುತ ಪಡಿಸಲಾಗಿದೆ.

ಪಠ್ಯಪುಸ್ತಕದ ಸಂರಚನೆ 'ಮೂರ್ತದಿಂದ ಅಮೂರ್ತ' 'ಸ್ಥೂಲದಿಂದ ಸೂಕ್ಷ್ಮ' 'ಸರಳದಿಂದ ಕಠಿಣ' ಮತ್ತು 'ಜ್ಞಾತದಿಂದ ಅಜ್ಞಾತ' ಈ ಸೂತ್ರಗಳ ಆಧಾರದಿಂದ ತಯಾರಿಸಲಾಗಿದೆ. ಮಕ್ಕಳನ್ನು ಕೃತಿಶೀಲರನ್ನಾಗಿ ಮಾಡುವುದು ಈ ಪಠ್ಯಪುಸ್ತಕದ ಮುಖ್ಯ ವೈಶಿಷ್ಟ್ಯವಾಗಿದೆ. ಪಠ್ಯಪುಸ್ತಕವನ್ನು ನಾಲ್ಕು ವಿಭಾಗಗಳಲ್ಲಿ ವಿಂಗಡಿಸಲಾಗಿದೆ.

ಮೊದಲನೆಯ ವಿಭಾಗದಲ್ಲಿ 'ಶಾಲೆಗೆ ಹೋಗೋಣ ಬಾ' ಈ ಕವಿತೆಯಿಂದ ಪುಸ್ತಕದ ಪ್ರಾರಂಭವಾಗುವುದು. ಚಿತ್ರಕಥೆ, ಒತ್ತಕ್ಷರಗಳ ದೃಢೀಕರಣ, ಅಲ್ಪಪ್ರಾಣ - ಮಹಾಪ್ರಾಣಗಳಲ್ಲಿಯ ವ್ಯತ್ಯಾಸ, ಕ್ರಿಯಾಪದಗಳು, ವಾಕ್ಯರಚನೆ, ಚಿತ್ರ ಹಾಗೂ ವಾಕ್ಯಗಳನ್ನು ಜೋಡಿಸು, ಶಬ್ದಗಳಿಂದ ವಾಕ್ಯರಚಿಸು ಇಂತಹ ಕೃತಿಗಳಿಂದ ಭಾಷಾಕೌಶಲ್ಯಗಳನ್ನು ವಿಕಾಸಗೊಳಿಸಲು ಪ್ರಯತ್ನಿಸಲಾಗಿದೆ. 'ಮೊಬೈಲ್', 'ಸ್ವಚ್ಛತೆ' ಈ ವಾಚನಪಾಠಗಳ ಮೂಲಕ ತಂತ್ರಜ್ಞಾನದ ಸದುಪಯೋಗ, ಸ್ವಚ್ಛತೆಯ ಮಹತ್ವವನ್ನು ತಿಳಿಸಲಾಗಿದೆ. ಬಣ್ಣ ತುಂಬು, ಮಾಡಿನೋಡು, ಮೊಬೈಲ್‌ದ ಬದಲಾದ ರೂಪಗಳು ಇಂತಹ ಕೃತಿಗಳನ್ನು ಕೊಡಲಾಗಿದೆ. ಕಸದ ವ್ಯವಸ್ಥಾಪನೆ ಹೇಗೆ ಮಾಡಬಹುದು ಎಂಬುದರ ಸಲುವಾಗಿ ಹಸಿಕಸ, ಒಣಕಸ ಬೇರ್ಪಡಿಸುವ ಕೃತಿಯನ್ನು ಕೊಡಲಾಗಿದೆ.

ಎರಡನೆಯ ವಿಭಾಗದಲ್ಲಿ 'ನೇತಾಜಿ', 'ನನ್ನ ಭಾರತ', 'ಗೋಲಗುಮ್ಮಟ' ಈ ವಾಚನಪಾಠಗಳ ಸಲುವಾಗಿ ಹೊಂದಿಸಿ ಬರೆ, ಅನುಕರಿಸು, ಉದಾಹರಣೆಯಲ್ಲಿ ತೋರಿಸಿದಂತೆ ಬರೆ. ಈ ರೀತಿಯಾದ ಕೃತಿಗಳನ್ನು ಕೊಡಲಾಗಿದೆ. ಇವುಗಳಿಂದ ಮಕ್ಕಳಲ್ಲಿ ಭಾಷಾ ಕೌಶಲ್ಯಗಳ ವಿಕಾಸದ ಜೊತೆಗೆ ನೈತಿಕ ಮೌಲ್ಯಗಳನ್ನು ಮೂಡಿಸಲು ಪ್ರಯತ್ನಿಸಲಾಗಿದೆ.

ವಿಭಾಗ ಮೂರರಲ್ಲಿ ಕಡಿಯ ಬೇಡ ಕಾಡು ಈ ಪದ್ಯದಿಂದ ಪರಿಸರ ಸಂರಕ್ಷಣೆ ನಮ್ಮ ಆಹಾರ ಸಂವಾದ ರೂಪದ ಪಾಠದ ಮೂಲಕ ಸಮತೋಲ ಆಹಾರದ ಮಹತ್ವವನ್ನು ತಿಳಿಸಿ ಕೊಡಲಾಗಿದೆ. ಮಕ್ಕಳನ್ನು ಕೃತಿಶೀಲರನ್ನಾಗಿ ಮಾಡಲು ಹಣ್ಣುಗಳ ಬುಟ್ಟಿ, ಅಭಿನಯಿಸು, ಬಣ್ಣದಲೋಕ, ಇಂತಹ ಕೃತಿಗಳನ್ನು ಕೊಡಲಾಗಿದೆ. ಸುಂದರಪುರ ಮತ್ತು ಸೋಮಪುರ ಎರಡೂ ಊರಿನ ವ್ಯತ್ಯಾಸದ ಮೂಲಕ ಪರಿಸರ ಸಂರಕ್ಷಣೆಯ ಮಹತ್ವವನ್ನು ತಿಳಿಸಿ ಕೊಡಲಾಗಿದೆ.

ಕೊನೆಯ ವಿಭಾಗದಲ್ಲಿ 'ಸ್ನೇಹಸಮ್ಮೇಲನ' ಕುರಿತು ವರ್ಣನೆ, ಇತರ ಹಬ್ಬಗಳ ಪರಿಚಯ, ಚಿತ್ರ ನೋಡಿ ಹೆಸರು ಬರೆ ಈ ಕೃತಿಯನ್ನು ಕೊಡಲಾಗಿದೆ. 'ನನ್ನ ಬಯಕೆ' ಕವಿತೆಯು ಮಗುವಿನ ಕಲ್ಪನೆಗೆ ಒತ್ತು ಕೊಡಲಾಗಿದೆ. 'ಇಲಿ ಮತ್ತು ಕಪ್ಪೆ' ಚಿತ್ರರೂಪದ ಕಥೆ ಕೊಡಲಾಗಿದೆ. 'ಪೆನ್ಸಿಲ್ ನಿನ್ನದೆ?' ತಪ್ಪಿನ ಅರಿವು ಈ ವಾಚನ ಪಾಠಗಳು ಮಗುವಿನ ಭಾವವಿಶ್ವಕ್ಕೆ ಸ್ಪಂದಿಸಿ ಮಗು ಕಲಿಕೆಯಲ್ಲಿ ಸಹಭಾಗಿಯಾಗಲು ಹುರಿದುಂಬಿಸುತ್ತವೆ.

ಒಟ್ಟಿನಲ್ಲಿ ಹೇಳುವುದಾದರೆ ಪಠ್ಯಪುಸ್ತಕದಲ್ಲಿಯ ಎಲ್ಲ ಚಟುವಟಿಕೆಗಳು ಮಗುವಿನಲ್ಲಿ ಕೃತಿಶೀಲ, ಜೀವನಕೌಶಲ್ಯಗಳ ಮೌಲ್ಯಗಳನ್ನು ಮೂಡಿಸಲು ಪೂರಕವಾಗಿವೆ. ಶಿಕ್ಷಕರು ಪಠ್ಯಪುಸ್ತಕವನ್ನು ಸೂಕ್ಷ್ಮವಾಗಿ ಅಭ್ಯಾಸಮಾಡಿ ಆಮೇಲೆ ವಿದ್ಯಾರ್ಥಿಗಳಿಗೆ ಅಧ್ಯಾಪನ ಮಾಡುವುದು ಅಪೇಕ್ಷಿತವಾಗಿದೆ.

# ಪರಿವಿಡಿ

## ವಿಭಾಗ ಒಂದು


★ ಶಾಲೆಗೆ ಹೋಗೋಣ (ಕವಿತೆ)

★ ಚಿತ್ರರೂಪ ಕಥೆ - ಚಿರತೆ

★ ರೈಲು ನಿಲ್ದಾಣ

1. ಮೊಬೈಲ್ 12

2. ಸ್ವಚ್ಛತೆ 16

3. ಇಂಗ್ಲಿಷ ತಿಂಗಳುಗಳು (ಕವಿತೆ) 19
   - ಎಂ.ಡಿ. ಗೋಗೇರಿ.

4. ಹಾಕಿ 21

5. ಪುಟ್ಟನ ಆಟ (ಕವಿತೆ) 24
   - ಜಂಬುನಾಥ ಕಂಚ್ಯಾಣಿ


## ವಿಭಾಗ ಮೂರು


11. ಕಡಿಯಬೇಡ ಕಾಡು (ಕವಿತೆ) 43
   - ಮ.ಸು. ಮನ್ನಾರ ಕೃಷ್ಣರಾವ್

12. ನಮ್ಮ ಆಹಾರ 45

13. ಹಣ್ಣುಗಳ ಬುಟ್ಟಿ 48

14. ಅಭಿನಯಿಸು 49

15. ಬಣ್ಣದ ಲೋಕ 50

16. ಸುಂದರಪುರ ಮತ್ತು ಸೋಮಪುರ 54


## ವಿಭಾಗ ಎರಡು


6. ಅನುಕರಣೆ 26

7. ನೇತಾಜಿ 28

8. ನನ್ನ ಭಾರತ (ಕವಿತೆ) 32

9. ಗೋಲಗುಮ್ಮಟ 36

10. ಪೋಲೀಸ ಕಾಕಾ 38


## ವಿಭಾಗ ನಾಲ್ಕು


17. ಸ್ನೇಹ ಸಮ್ಮೇಲನ 59

18. ನನ್ನ ಬಯಕೆ (ಕವಿತೆ) 62
   - ಪ.ಗು. ಸಿದ್ದಾಪೂರ

19. ಇಲಿ ಮತ್ತು ಕಪ್ಪೆ 65

20. ಈ ಪೆನ್ಸಿಲ್ ನಿನ್ನದೆ? 69

21. ತಪ್ಪಿನ ಅರಿವು 72

22. ಓ ಗೆಳೆಯಾ (ಕವಿತೆ) 74

# ಶಾಲೆಗೆ ಹೋಗೋಣ

ಬನ್ನಿರಿ ಶಾಲೆಗೆ ಹೋಗೋಣ
ಅಕ್ಷರ ಕಲಿತು ಜಾಣರಾಗೋಣ ॥ ಪ ॥


ಅ, ಆ, ಇ, ಈ ಬರೆಯೋಣ
ಒಂದು, ಎರಡು ಎಣಿಸೋಣ
ಕಲಿತು ಜಾಣರಾಗೋಣ
ಮುಂದಕೆ ನಾವು ಸಾಗೋಣ ॥ 1 ॥

ಕ, ಕಾ ಬಳ್ಳಿ ತಿಳಿಯೋಣ
ಕೂಡಿಸಿ, ಕಳೆ ಕಲಿಯೋಣ
ಕಲಿತು ಜಾಣರಾಗೋಣ
ಮುಂದಕೆ ನಾವು ಸಾಗೋಣ ॥ 2 ॥

ನೀತಿ ಕಥೆಗಳ ಓದೋಣ
ನೀತಿ ಪಾಠ ಕಲಿಯೋಣ
ಕಲಿತು ಜಾಣರಾಗೋಣ
ಮುಂದಕೆ ನಾವು ಸಾಗೋಣ ॥ 3 ॥

ಲಗೋರಿ, ಖೋ ಖೋ ಆಡೋಣ
ಆರೋಗ್ಯವಂತರಾಗೋಣ
ಕಲಿತು ಜಾಣರಾಗೋಣ
ಮುಂದಕೆ ನಾವು ಸಾಗೋಣ ॥ 4 ॥



**ಅಕ್ಷರ ಕಲಿತು ಸಾಕ್ಷರನಾಗು**

# ಚಿತ್ರರೂಪ ಕಥೆ – ಚಿರತೆ





# ಬಿಟ್ಟ ಚೌಕಟ್ಟಿನಲ್ಲಿ ಸರಿಯಾದ ಒತ್ತಕ್ಷರ ತುಂಬು



1. ಉತಮ
2. ಸಕರೆ
3. ಸಜನ
4. ಕನಡಿ
5. ಹಗ
6. ಉಯಾಲೆ
7. ಟಣನೆ
8. ಪೆಟಿಗೆ
9. ಹೆಬುಲಿ
10. ಅವ
11. ಗಡ
12. ಎಚರ
13. ಉದ
14. ಅಪ
15. ಅಮ



## ಚಿತ್ರ ನೋಡಿ ಹೆಸರು ಬರೆ



1. ಸಿಹಿಯಾದ  ____________

2. ಇದು  ನ ತೋಟ.

____________

3.  ನಿಂದ ರಾತ್ರಿಯಲ್ಲಿ ಬೆಳದಿಂಗಳು.

____________

4.  ಯಲ್ಲಿ ಮುಖ ನೋಡು.

____________

## ಹೊಂದಿಸಿ ಬರೆ

| | | | |
|---|---|---|---|
| 1. | ತ | (ಅ) | ್ನ |
| 2. | ಮ | (ಆ) | ್ಶ |
| 3. | ರ | (ಇ) | ್ತ |
| 4. | ಯ | (ಈ) | ್ಖ |
| 5. | ನ | (ಉ) | ್ಮ |
| 6. | ಶ | (ಊ) | ್ರ |
| 7. | ಖ | (ಋ) | ್ಯ |



# ಕೆಳಗಿನ ಪದಗಳನ್ನು ಓದು



| | |
|---|---|
| ದನ | ಧನ |
| ಬಲೆ | ಭಲೆ |
| ಸರ | ಶರ |
| ತಡಿ | ಥಡಿ |
| ಚಲ | ಛಲ |
| ದನಿ | ಧಣಿ |
| ಕಣ | ಖಣ |

## ಕೆಳಗಿನ ಚಿತ್ರಗಳನ್ನು ನೋಡು – ಏನು ಮಾಡುತ್ತಿದ್ದಾರೆಂದು ಹೇಳು




















# ನಾಯಿಯ ಅವಯವಗಳನ್ನು ಹೆಸರಿಸು




## ಬರೆಯೋಣ ಬಾ

ಉದಾ: ನಾಯಿಗೆ ಒಂದು ಬಾಲ ಇದೆ.

1. ________________

2. ________________

3. ________________

4. ________________

5. ________________

6. ________________

# ಚಿತ್ರ ಹಾಗೂ ವಾಕ್ಯಗಳನ್ನು ಸರಿಯಾಗಿ ಜೋಡಿಸು



(ಅ) ಆಕಳು ಮೇಯುತ್ತಿದೆ.



(ಬ) ಗಾಳಿಪಟ ಹಾರುತ್ತಿದೆ.



(ಕ) ಪಕ್ಷಿ ಹಾರಾಡುತ್ತಿದೆ.



(ಡ) ನವಿಲು ಕುಣಿಯುತ್ತಿದೆ.



## ಶಬ್ದಗಳನ್ನು ಜೋಡಿಸು ಯೋಗ್ಯವಾದ ವಾಕ್ಯ ರಚಿಸು.



| | | |
|---|---|---|
| ಕುಸುಮ | ನೀರು | ಕುಡಿಯಿತು |
| ಬಸವ | ಹಾಲು | ಕುಡಿದಳು |
| ನಾಯಿ | ಹಣ್ಣು | ಕುಡಿದನು |
| ಗಿಳಿ | ಕಾಳು | ತಿಂದನು |
| ಬೆಕ್ಕು | ಮಜ್ಜಿಗೆ | ತಿಂದಿತು |
| ಕಾಗೆ | ಬೆಣ್ಣೆ | ತಿಂದಳು |

ಉದಾ : ಕುಸುಮ ನೀರು ಕುಡಿದಳು.

1.


2.

3.

4.

5.

# ರೈಲು ನಿಲ್ದಾಣ




ಸ್ವಚ್ಛತೆ ಕಾಪಾಡಿರಿ

# 1 ಮೊಬೈಲ್



ಹಲೋ, ಮಕ್ಕಳೇ ನಾನು ಯಾರು? ನಾನು ಮೊಬೈಲ್.

ನನ್ನನ್ನು ಕಂಡಾಗ ನಿಮಗೆ ಸಂತೋಷವೇ?

ನನಗೆ ಕನ್ನಡದಲ್ಲಿ

ಸಂಚಾರವಾಣಿ, ಚರವಾಣಿ, ಜಂಗಮವಾಣಿ, ಭ್ರಮಣಧ್ವನಿ ಹೀಗೆ ಹೆಸರುಗಳುಂಟು.

ನಾನು ಈಗ ನಿಮ್ಮೆಲ್ಲರ ಮನೆಯಲ್ಲಿ ಇದ್ದೇನೆ. ಎಲ್ಲರೂ ನನ್ನನ್ನು ಬಳಸುವರು. ಮಕ್ಕಳೇ ನಾನು ನಿಮಗೆ ಬೇಕೆ?

ಹಾಗಾದರೆ

ಎಚ್ಚರ! ಎಚ್ಚರ!! ಎಚ್ಚರ!!!

ನನ್ನನ್ನು ಅವಶ್ಯಕತೆ ಇದ್ದಲ್ಲಿ ಮಾತ್ರ ಉಪಯೋಗಿಸಿ.

ಅತಿಯಾಗಿ ನೋಡಬೇಡಿ, ಅತಿಯಾಗಿ ಉಪಯೋಗಿಸಬೇಡಿ.




★ ಮೊಬೈಲ್‌ದ ಬದಲಾದ ರೂಪ





## ಕೆಳಗಿನ ಚಿತ್ರಗಳನ್ನು ನೋಡಿ ಸರಿ ☐ ತಪ್ಪು ☐ ಬಣ್ಣ ತುಂಬು


 ☐

 ☐

 ☐

 ☐

★ ಮಾಡಿ ನೋಡು



**ಜ್ಞಾನವೇ ಬಾಳಿನ ಬೆಳಕು**

# ಚಿತ್ರಗಳನ್ನು ನಿರೀಕ್ಷಿಸು, ವರ್ಣಿಸು









# 2 ಸ್ವಚ್ಛತೆ

ಸ್ವಚ್ಛ ಭಾರತ ಸುಂದರಭಾರತ, ಎಲ್ಲಿ ಸ್ವಚ್ಛತೆ ಇದೆಯೋ ಅಲ್ಲಿದೆ ಆರೋಗ್ಯ. ಸ್ವಚ್ಛ ಭಾರತ ಅಭಿಯಾನ ಈ ಕಾರ್ಯಕ್ರಮ ದೇಶದೆಲ್ಲೆಡೆ ಜೋರಾಗಿ ನಡೆಯುತ್ತಿದೆ.

ಇಂದು ನಾವು ಮನೆ, ಶಾಲೆ, ನಮ್ಮ ಪರಿಸರ ಸ್ವಚ್ಛವಾಗಿಟ್ಟರೆ ರೋಗ ರುಜಿನಗಳು ಹುಟ್ಟಿಕೊಳ್ಳುವದಿಲ್ಲ. **ಮನೆಯ ಸುತ್ತ ಕಸ ಆರೋಗ್ಯಕ್ಕೆ ವಿಷ** ಎಂಬಂತೆ ಎಲ್ಲೆಡೆ ಸ್ವಚ್ಛತೆ ಕಾಪಾಡೋಣ.

ಬಯಲು ಶೌಚಕ್ಕೆ ಹೋಗುವುದು ಬೇಡ. ಮನೆ-ಮನೆಗಳಲ್ಲಿ ಶೌಚಾಲಯ ಕಟ್ಟಿಸೋಣ. ನಾವು ಸ್ವಚ್ಛವಾಗಿದ್ದು, ಇತರರಿಗೂ ಸ್ವಚ್ಛವಾಗಿರಲು ತಿಳಿಸಿ ದೇಶವನ್ನು ಮಾದರಿ ದೇಶವನ್ನಾಗಿ ಮಾಡಲು ನಾವೆಲ್ಲರೂ ಕೈಜೋಡಿಸೋಣ.





**ನಮ್ಮ ನಡೆ ಸ್ವಚ್ಛತೆಯ ಕಡೆ**



★ ಹಸಿಕಸ  ಒಣಕಸ  ಉದಾಹರಣೆಯಲ್ಲಿ ತೋರಿಸಿದಂತೆ ಯೋಗ್ಯ ಡಬ್ಬಿಯಲ್ಲಿ ಹಾಕು




★ ಉದಾಹರಣೆಯಲ್ಲಿ ತೋರಿಸಿದಂತೆ ಶಬ್ದಚಕ್ರ ತಯಾರಿಸು




**ಸ್ವಚ್ಛತೆಯೇ ಸೇವೆ**

★ ಕೆಳಗಿನ ವಿಧಾನ ಸರಿ (✓) ತಪ್ಪು (✗) ಗುರುತಿಸು

1) ರಸ್ತೆಯಮೇಲೆ ಕಸ ಎಸೆಯುವುದು. [ ]


2) ಸ್ವಚ್ಛ ಭಾರತ ಸುಂದರ ಭಾರತ. [ ]

3) ಶಾಲೆಯ ಪರಿಸರ ಹೊಲಸು ಮಾಡುವುದು. [ ]

4) ಊಟ ಮಾಡುವವೊದಲು ಕೈ ತೊಳೆಯಬೇಕು. [ ]

★ ಕಂಸಿನಲ್ಲಿ ಕೊಟ್ಟ ಅಕ್ಷರಗಳ ಸಹಾಯದಿಂದ ಪದಬಂಧ ಪೂರ್ಣ ಮಾಡು.

(ರಿ, ರ, ಸ, ಪ)



# ಇಂಗ್ಲಿಷ ತಿಂಗಳುಗಳು

ಮೊದಲನೆ ತಿಂಗಳು ಜನೇವರಿ
ಎರಡನೆ ತಿಂಗಳು ಫೆಬ್ರುವರಿ
ಮಾರ್ಚನಲ್ಲಿ ಓದಿರಿ
ಪರೀಕ್ಷೆಗಾಗಿ ತಯ್ಯಾರಿ

ಎಪ್ರೀಲದಲ್ಲಿ ರಿಜಲ್ಟು
ಎದೆಯಲ್ಲಿ ಆಗ ಟುಕು ಟುಕು
ಪಾಸಾದೆ ನೋಡಾ
ಓಣಿ ತುಂಬಾ ಪೇಡಾ

ಮೇ ತಿಂಗಳು ಸೂಟಿ
ಮಾಯವಾತೊ ಪಾಟಿ
ಪೆನ್ನ ಪೆನ್ಸಿಲು ಕಳದಾವ
ಸಾಲಿ ಡ್ರೆಸ್ಸು ಹರದಾವ

ಜೂನ ಬಂತು ಜುಳು ಜುಳು
ಜುಲೈ ತಂತು ಸುಳು ಸುಳು
ಅಗಷ್ಟ ತಿಂಗಳು ಬಂತು
ಏರಿಸು ನಿಶಾನೆ ನಿಂತು

ಸಪ್ಟೆಂಬರ ತಿಂಗಳ
ಗುರುಗಳಿಗೆ ಜಯ ಮಂಗಳ
ಅಕ್ಟೋಬರ ಬಂತು
ಗಾಂಧಿ ಅಜ್ಜನ ನೆನಪಾತು

ನವ್ಹೆಂಬರ ಹದಿನಾಲ್ಕು
ಮಕ್ಕಳಿಗಾಗಿ ಸಿಹಿಬೇಕು
ಡಿಸೆಂಬರವೇ ಕೊನೆಗೆ
ಗಂಟೆ ಹೊಡೆದರೆ ಮನೆಗೆ

– ಎಂ.ಡಿ. ಗೋಗೇರಿ.







★ ಹಿಂದೂ ತಿಂಗಳುಗಳನ್ನು ಓದಿ ಬರೆ.

| | |
|---|---|
| 1) ಚೈತ್ರ .................................. | 7) ಆಶ್ವೀನ .................................. |
| 2) ವೈಶಾಖ .............................. | 8) ಕಾರ್ತಿಕ .............................. |
| 3) ಜ್ಯೇಷ್ಠ .................................. | 9) ಮಾರ್ಗಶಿರ .............................. |
| 4) ಆಷಾಢ .............................. | 10) ಪುಷ್ಯ .................................. |
| 5) ಶ್ರಾವಣ .............................. | 11) ಮಾಘ .................................. |
| 6) ಭಾದ್ರಪದ .............................. | 12) ಫಾಲ್ಗುಣ .............................. |

★ ಆವರಣದಲ್ಲಿಯ ಸರಿಯಾದ ಪದ ಚಿತ್ರದ ಕೆಳಗೆ ಬರೆ.

**(ಮಳೆಗಾಲ, ಚಳಿಗಾಲ, ಬೇಸಿಗೆಕಾಲ)**







★ ಕೆಳಗಿನ ಬಲೂನಗಳಲ್ಲಿಯ ಋತುಗಳ ಹೆಸರು ಓದು.



# 4 ಹಾಕಿ

ಈ ಆಟ ಹಾಕಿ ಆಟ. ಈ ಆಟದಲ್ಲಿ ಎರಡು ತಂಡಗಳಿದ್ದು ಪ್ರತಿಯೊಂದು ತಂಡದಲ್ಲಿ ಹನ್ನೊಂದು ಆಟಗಾರರು ಇರುತ್ತಾರೆ. ಹಾಕಿ ಆಟದಲ್ಲಿ ಹಾಕಿಸ್ಟಿಕ್ ಮತ್ತು ಚೆಂಡು ಮಹತ್ವದ್ದಾಗಿವೆ. ಈ ಆಟದಲ್ಲಿ ಪ್ರತಿಯೊಬ್ಬ ಆಟಗಾರನ ಕೈಯಲ್ಲಿ ಒಂದು ಹಾಕಿಸ್ಟಿಕ್ ಇರುತ್ತದೆ. ಹಾಕಿಸ್ಟಿಕ್‌ದ ಸಹಾಯದಿಂದ ಚೆಂಡನ್ನು ಗೋಲಿನೊಳಗೆ ಹಾಕುತ್ತಾರೆ. ಯಾವ ತಂಡದವರು ಹೆಚ್ಚು ಗೋಲಗಳನ್ನು ಹಾಕುತ್ತಾರೆಯೋ ಅವರು ವಿಜಯಶಾಲಿಯಾಗುವರು.

ಈ ಆಟವನ್ನು ತಾಲೂಕು, ಜಿಲ್ಲೆ, ರಾಜ್ಯ, ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧೆಗಳನ್ನು ಆಯೋಜಿಸುತ್ತಾರೆ. ಪ್ರತಿ ನಾಲ್ಕು ವರ್ಷಕ್ಕೊಮ್ಮೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಹಾಕಿ **ವಿಶ್ವಕಪ್** ಪಂದ್ಯವನ್ನು ಆಯೋಜಿಸಲಾಗುತ್ತದೆ.

ಈ ಆಟದಲ್ಲಿ ಹಾಕಿಯ ಮಾಂತ್ರಿಕ ಎಂದು ಖ್ಯಾತರಾದ ಧ್ಯಾನಚಂದರಂತಹ ಆಟಗಾರರು ಪ್ರಸಿದ್ಧಿ ಪಡೆದಿದ್ದಾರೆ.



**ಆಡಿ ಕಲಿ, ನೋಡಿ ತಿಳಿ**




★ ಸರಿಯಾಗಿ ಜೋಡಿಸು



1) ಚದುರಂಗ



2) ಕುಂಟೆಬಿಲ್ಲೆ



3) ಲಗೋರಿ



4) ಲುಡೊ



5) ಕಬಡ್ಡಿ




6) ಕ್ಯಾರಮ್

★ ವಿಂಗಡಿಸಿ ಬರೆ

ಕ್ರಿಕೇಟ, ಹಾಕಿ, ಕ್ಯಾರಮ್, ಕಬಡ್ಡಿ, ಚದುರಂಗ, ಹಾವು ಏಣಿ ಆಟ, ಖೋ-ಖೋ, ಫುಟ್‌ಬಾಲ್

| ಹೊರಾಂಗಣ ಆಟಗಳು | ಒಳಾಂಗಣ ಆಟಗಳು |
|---|---|
| | |
| | |
| | |
| | |
| | |

★ ಕೆಳಗಿನ ಅಕ್ಷರಗಳನ್ನು ವರ್ಣಮಾಲೆಯ ಕ್ರಮದಲ್ಲಿ ಜೋಡಿಸಿ ಚಿತ್ರಪೂರ್ಣ ಮಾಡು.



# 5 ಪುಟ್ಟನ ಆಟ


ಗಿಲ್ ಗಿಲ್ ಗೆಜ್ಜೆಯ ತಾಳಕೆ ಪುಟ್ಟನು
ಗಲ್ ಗಲ್ ಹೆಜ್ಜೆಯನಿಕ್ಕುವನು ।
ಬಗೆ ಬಗೆ ಮೋಜನು ಮಾಡುತ ಸಕಲರ
ಮನಸಿಗೆ ರಂಜನೆ ನೀಡುವನು ॥

ಚುಕು ಬುಕ್ ಚುಕು ಬುಕ್ ಅಗ್ಗಿನಗಾಡಿಯು
ಪಡಸಾಲೆಯಲ್ಲಿ ಓಡುವದು ।
ಡುರ್ ಡುರ್ ಸದ್ದನು ಮಾಡುತ ಮೋಟರ
ಅಜ್ಜಿಯ ಸುತ್ತ ತಿರುಗುವುದು ॥

ಟಕ್ ಟಕ್ ಟಕ್ ಟಕ್ ಕುದುರೆಯ ಗಾಡಿಯು
ರಭಸದಿ ಬರುವುದು ಕುಣಿಯುತ್ತ ।
ಡುರುಕಿ ಹಾಕುತ ನಡೆವುದು ಎತ್ತು
ಎದುರಾದವರಿಗೆ ಇರಿಯುತ್ತ ॥

ಕಂದನ ಆಟವ ನೋಡುತ ಕುಳಿತರೆ
ಅಮ್ಮನು ಎಲ್ಲವ ಮರೆಯುವಳು ।
ಚಿನ್ನಾ ರನ್ನಾ ಎನ್ನುತ ಅಪ್ಪಿ
ಮುದ್ದಿನ ಮಳೆಯನು ಕರೆಯುವಳು ॥

– ಜಂಬುನಾಥ ಕಂಚ್ಯಾಣಿ



★ ಉದಾಹರಣೆಯಂತೆ ಕೆಳಗಿನ ವಾಕ್ಯಗಳನ್ನು ಓದಿ ಸರಿಯಾದ ಚಿತ್ರಗಳಿಗೆ ಕ್ರಮಾಂಕ ಕೊಡು.





1















ಉದಾ: 1) ಕಮಲಾ ನೀರು **ಗಟಗಟನೆ** ಕುಡಿದಳು.

2) ದಿನಕರ **ಲಗುಲಗು** ಶಾಲೆಗೆ ಹೊರಟಿದ್ದಾನೆ.

3) ಮೀರಾಳ ಬಟ್ಟೆ **ಲಕಲಕ** ಹೊಳೆಯುತ್ತಿದೆ.

4) ಕಾಗೆಯು **ಗಡಗಡ** ನಡುಗುತ್ತಿದೆ.

5) ನೀರು **ಸಳಮಳ** ಕುದಿಯುತ್ತಿದೆ.

6) ಗೌರಿ **ಗಳಗಳ** ಅಳುತ್ತಿದ್ದಾಳೆ.

7) ಬೆಕ್ಕು **ಲೊಚಲೊಚ** ಹಾಲು ಕುಡಿಯುತ್ತಿದೆ.

8) ಗಣೇಶ **ಗಬಗಬ** ಲಡ್ಡು ತಿನ್ನುತ್ತಿದ್ದಾನೆ.

9) **ಧಗಧಗ** ಬೆಂಕಿ ಉರಿಯುತ್ತಿದೆ.

# 6 ಅನುಕರಣೆ

★ ಚಿತ್ರಗಳನ್ನು ನೋಡು, ಅದರಂತೆ ಅನುಕರಣೆ ಮಾಡು.



ಕುಣಿಯೋಣ ಕುಣಿಯೋಣ
ನವಿಲಿನ ಹಾಗೆ ಕುಣಿಯೋಣ
ಥಕಥೈ ಥಕಥೈ ಥಕಥೈ





ನೆಗೆಯೋಣ ನೆಗೆಯೋಣ
ಕಪ್ಪೆಯ ಹಾಗೆ ನೆಗೆಯೋಣ
ಟುಣು–ಟುಣು ಟುಣು–
ಟುಣು ಟುಣು–ಟುಣು





ಏರೋಣ ಏರೋಣ
ಅಳಿಲಿನ ಹಾಗೆ ಏರೋಣ
ಸರಸರ ಸರಸರ ಸರಸರ





ಓಡೋಣ ಓಡೋಣ
ರೈಲಿನ ಹಾಗೆ ಓಡೋಣ
ಚುಕುಬುಕು ಚುಕುಬುಕು ಚುಕುಬುಕು





★ ಉದಾಹರಣೆಯಲ್ಲಿ ತೋರಿಸಿದಂತೆ ಚಿತ್ರದಲ್ಲಿರುವ ವ್ಯಕ್ತಿಗಳೊಂದಿಗೆ ಶ್ರೀಕೃಷ್ಣನ ಬಾಂಧವ್ಯವನ್ನು ಗುರುತಿಸಿ ಬರೆ.



ರುಕ್ಮಿಣಿ



ಬಲರಾಮ



ಸುಭದ್ರೆ



ದೇವಕಿ



ಶ್ರೀಕೃಷ್ಣ



ಅರ್ಜುನ



ಕಂಸ



ವಸುದೇವ

★ ಉದಾ: ಬಲರಾಮ = ಶ್ರೀಕೃಷ್ಣನ **ಅಣ್ಣ**

...................... = ಶ್ರೀಕೃಷ್ಣನ ......................

...................... = ಶ್ರೀಕೃಷ್ಣನ ......................

...................... = ಶ್ರೀಕೃಷ್ಣನ ......................

...................... = ಶ್ರೀಕೃಷ್ಣನ ......................

...................... = ಶ್ರೀಕೃಷ್ಣನ ......................

...................... = ಶ್ರೀಕೃಷ್ಣನ ......................

# 7 ನೇತಾಜಿ



ನೇತಾಜಿ ಸುಭಾಸಚಂದ್ರಬೋಸ್ ಇವರು ಓಡಿಶಾ ರಾಜ್ಯದ ಕಟಕ ನಗರದಲ್ಲಿ ಜನಿಸಿದರು. ಇವರ ತಂದೆ ಜಾನಕಿದಾಸ ಮತ್ತು ತಾಯಿ ಪ್ರಭಾವತಿ.

ಇವರು ಬಾಲ್ಯದಿಂದಲೇ ತುಂಬಾ ಬುದ್ಧಿವಂತರಾಗಿದ್ದರು. ಆದ್ದರಿಂದ ಇವರನ್ನು ಐದನೆಯ ವಯಸ್ಸಿನಲ್ಲಿಯೇ ಯುರೋಪಿನ ಶಾಲೆಗೆ ಸೇರಿಸಿದರು. ಪ್ರಾಥಮಿಕ ಶಿಕ್ಷಣ ಪೂರ್ಣವಾಗುತ್ತಲೇ ಇವರು “ರೇವನ್” ಕಾಲೇಜಿಗೆ ಸೇರಿದರು.

ಅಲ್ಲಿಯ ವಿದ್ಯಾರ್ಥಿಗಳು ಸ್ವದೇಶಿ ಉಡುಪುಗಳನ್ನು ಧರಿಸಿದ್ದರು. ಅದನ್ನು ಕಂಡು ಅವರೂ ಕೂಡ ಸ್ವದೇಶಿ ಉಡುಪುಗಳನ್ನು ಧರಿಸಿದರು. ಹೀಗೆ ಅವರು ದೇಶಪ್ರೇಮವನ್ನು ಎತ್ತಿ ಹಿಡಿದರು.

ಮುಂದೆ ಅವರು ಭಾರತ ದೇಶದ ಸ್ವಾತಂತ್ರ್ಯಕ್ಕಾಗಿ “ಆಝಾದ ಹಿಂದ್” ಸೇನೆಯ ಮುಂದಾಳತ್ವ ವಹಿಸಿದರು.

ಭಾರತ ದೇಶದ ಸ್ವಾತಂತ್ರ್ಯಕ್ಕಾಗಿ ಹಗಲಿರುಳು ಹೋರಾಡಿ ಹಲವು ಸಲ ಸೆರೆಮನೆವಾಸವನ್ನು ಅನುಭವಿಸಿದರು. “ನೀವು ನನಗೆ ರಕ್ತ ಕೊಡಿ, ನಾನು ನಿಮಗೆ ಸ್ವಾತಂತ್ರ್ಯ ಕೊಡುತ್ತೇನೆ” ಎಂದು ಅವರು ಸಿಂಹ ಗರ್ಜನೆ ಮಾಡಿದರು.



★ ಒಂದೇ ವಾಕ್ಯದಲ್ಲಿ ಉತ್ತರ ಬರೆ

ಅ) ನೇತಾಜಿಯವರು ಎಲ್ಲಿ ಜನಿಸಿದರು?

ಆ) ನೇತಾಜಿಯವರು ಯಾವ ಕಾಲೇಜಿಗೆ ಸೇರಿದರು?

ಇ) ನೇತಾಜಿಯವರು ಎಂತಹ ಉಡುಪನ್ನು ಧರಿಸಿದರು?

ಈ) ನೇತಾಜಿಯವರ ತಂದೆ-ತಾಯಿಯ ಹೆಸರೇನು?

ಉ) ನೇತಾಜಿಯವರು ಏನೆಂದು ಗರ್ಜಿಸಿದರು?

★ ಕೆಳಗಿನವುಗಳಲ್ಲಿ ಯೋಗ್ಯ ಪರ್ಯಾಯವನ್ನು ಆರಿಸಿ ಬಿಟ್ಟ ಸ್ಥಳ ತುಂಬು

i) ನೇತಾಜಿಯವರು ................. ಸೇನೆಯ ಮುಂದಾಳತ್ವ ವಹಿಸಿದರು.

ಅ) ಭಾರತ ಹಿಂದ ಸೇನೆ

ಬ) ಆಝಾದ ಹಿಂದ್ ಸೇನೆ

ಕ) ಮಹಾರಾಷ್ಟ್ರ ಹಿಂದ ಸೇನೆ

ii) ನೇತಾಜಿಯವರು .................. ಕಾಲೇಜಿಗೆ ಸೇರಿದರು.

ಅ) ರೇವನ್

ಬ) ದೇವನ್

ಕ) ರೋಮನ್

iii) ದೇಶದ ........................ ಕ್ಕಾಗಿ ಹೋರಾಡಿದರು.

ಅ) ರಾಜಕೀಯ

ಬ) ಸ್ವಾತಂತ್ರ್ಯ

ಕ) ಸಮಾಜ


**ಇಂದಿನ ಮಕ್ಕಳೇ ನಾಳಿನ ನಾಗರಿಕರು**

★ **ಕೆಳಗೆ ಕೊಟ್ಟ ಶಬ್ದಗಳನ್ನು ಸರಿಪಡಿಸಿ ಬರೆ**

1. ಸೆ ಮ ರೆ ನೆ ..................................................
2. ಹ ಲಿ ರು ಗ ಳು ..................................................
3. ಥ ಪ್ರಾ ಕ ಮಿ ..................................................

★ **ಕೆಳಗೆ ಕೊಟ್ಟ ಶಬ್ದಗಳನ್ನು ಉದಾಹರಣೆಯಂತೆ ಪೂರ್ಣಗೊಳಿಸು**

ಉದಾ: ಪರ್ವ



★ ಕೆಳಗಿನ ಸ್ವಾತಂತ್ರ್ಯ ಹೋರಾಟಗಾರರ ಚಿತ್ರಗಳನ್ನು ಗುರುತಿಸಿ, ಅವರ ಹೆಸರನ್ನು ಬರೆಯಿರಿ














# 8 ನನ್ನ ಭಾರತ

ನನ್ನ ಭಾರತ ಅಂದ ಭಾರತ
ನನ್ನ ಭಾರತ ಒಂದು ಭಾರತ
ಹಲವು ಧರ್ಮ ಹಲವು ಜಾತಿ
ಕೂಡಿ ಬಾಳಲು ಇಲ್ಲ ಭೀತಿ

ನನ್ನ ಭಾರತ ಚೆಂದ ಭಾರತ
ನನ್ನ ಭಾರತ ಒಂದು ಭಾರತ
ವಿವಿಧ ಭಾಷೆ ವಿವಿಧ ವೇಷ
ಸೇರಿ ಬದುಕಲು ಬಲು ಹರುಷ

ನನ್ನ ಭಾರತ ಅಂದ ಭಾರತ
ನನ್ನ ಭಾರತ ಒಂದು ಭಾರತ
ಹಲವು ನದಿಗಳು ಹಲವು ಗಿರಿಗಳು
ಹೊಗಳಿ ಹೇಳಲು ಇಲ್ಲ ಪದಗಳು





★ **ಉದಾಹರಣೆಯಲ್ಲಿ ತೋರಿಸಿದಂತೆ ಬರೆ.**

ಉದಾ: ವಾಹನ - ವಾಹನಗಳು

ಅ) ಭಾಷೆ – ..........................................

ಬ) ವೇಷ – ..........................................

ಕ) ಧರ್ಮ – ..........................................

ಡ) ಪ್ರಾಣಿ – ..........................................

ಇ) ಪಕ್ಷಿ – ..........................................

★ **ಉದಾಹರಣೆಯಲ್ಲಿ ತೋರಿಸಿದಂತೆ ಬರೆ.**

ಉದಾ : ಪಾಠಗಳು – ಪಾಠ

ಅ) ಪದಗಳು – ..........................................

ಬ) ಗಿರಿಗಳು – ..........................................


ಕ) ನದಿಗಳು – ..........................................


ಡ) ಆಟಗಳು – ..........................................

ಇ) ಮನೆಗಳು – ..........................................

★ ಕೆಳಗಿನ ಶಬ್ದಗಳನ್ನು ಓದು. ಯೋಗ್ಯ ಹೂವಿನಲ್ಲಿ ಬರೆ

| | | | |
|---|---|---|---|
| ಕೃಷ್ಣಾ | ಕನ್ನಡ | ಹಿಂದಿ | ಮರಾಠಿ |
| ಭೀಮಾ | ಇಸ್ಲಾಂ | ಹಿಂದು | ಕಾವೇರಿ |
| ಇಂಗ್ಲಿಷ | ಗೋದಾವರಿ | ಶೀಖ | ಕ್ರೈಸ್ತ |




ನನ್ನ ಇಷ್ಟಗಳು
ಆಟ,
ಊಟ,
ಹೂವು,

# 9 ಗೋಲಗುಮ್ಮಟ



ಗೋಲಗುಮ್ಮಟ ಕರ್ನಾಟಕ ರಾಜ್ಯದ ವಿಜಯಪುರದಲ್ಲಿ ಇದೆ. ವಿಜಯಪುರವನ್ನು ಹಿಂದೆ ವಿಜಾಪೂರ ಎಂದು ಕರೆಯುತ್ತಿದ್ದರು. ಗೋಲಗುಮ್ಮಟವನ್ನು ಸುಲ್ತಾನ ಮಹಮ್ಮದಆದಿಲ್‌ಶಾಹನು ಕಟ್ಟಿಸಿದನು. ಸುತ್ತಮುತ್ತ ಸುಂದರವಾದ ಉದ್ಯಾನದ ಮಧ್ಯದಲ್ಲಿ ಭವ್ಯವಾದ ಗುಮ್ಮಟವು ತಲೆ ಎತ್ತಿ ನಿಂತಿದೆ. ಗೋಲಗುಮ್ಮಟ ಇದು ಅದ್ಭುತವಾದ ಗುಮ್ಮಟ ಜಗತ್ತಿನಲ್ಲಿ ಅತ್ಯಂತ ದೊಡ್ಡದಾದ ಗುಮ್ಮಟಗಳಲ್ಲಿ ಇದು ಕೂಡ ಒಂದು.

ಗುಮ್ಮಟದ ಒಳಗಡೆ ಒಂದು ಬಾರಿ ಕೂಗಿದರೆ ಏಳು ಸಲ ಪ್ರತಿಧ್ವನಿಯಾಗುತ್ತದೆ. ಇದು ಈ ಗುಮ್ಮಟದ ರಚನಾ ಕೌಶಲ್ಯವಾಗಿದೆ.

ಗೋಲಗುಮ್ಮಟದ ಆವರಣದಲ್ಲಿ ವಸ್ತು ಸಂಗ್ರಹಾಲಯವಿದೆ. ಅಲ್ಲಿ ಸುಲ್ತಾನರ ಕಾಲದ ಆಯುಧಗಳು, ಪಾತ್ರೆಗಳು, ನಾಣ್ಯಗಳು ಹಾಗೂ ಶಿಲಾಲೇಖಗಳನ್ನು ಸಂಗ್ರಹಿಸಿ ಇಡಲಾಗಿದೆ.

ಇದೆ ತರಹ ಇನ್ನೂ ಅನೇಕ ಐತಿಹಾಸಿಕ ಸ್ಥಳಗಳು ವಿಜಯಪುರದಲ್ಲಿವೆ.



★ ಕೆಳಗಿನ ಚಿತ್ರಗಳನ್ನು ನಿರೀಕ್ಷಿಸು, ನಿನಗೆ ಗೊತ್ತಿರುವ ಚಿತ್ರದ ಕೆಳಗೆ ✓ ಗುರುತು ಮಾಡು









★ ಒಂದೇ ಶಬ್ದದಲ್ಲಿ ಉತ್ತರ ಬರೆ.

1) ವಿಜಯಪುರಕ್ಕೆ ಇರುವ ಮೊದಲ ಹೆಸರು : .................................

2) ಗೋಲಗುಮ್ಮಟ ಕಟ್ಟಿಸಿದ ವ್ಯಕ್ತಿ : ..........................................

**ದೇಶ ಸುತ್ತು, ಕೋಶ ಓದು**

# 10 ಪೋಲೀಸ ಕಾಕಾ



ಮಕ್ಕಳೇ, ಇವರು ಪೋಲೀಸ ಕಾಕಾ. ನೀವು ಇವರನ್ನು ಜಾತ್ರೆ, ಬಸ್ ನಿಲ್ದಾಣ, ಮುಂತಾದ ಸ್ಥಳಗಳಲ್ಲಿ ನೋಡಿರಬಹುದು.

ಸೈನಿಕರು ದೇಶದ ರಕ್ಷಣೆ ಮಾಡುವರು. ಪೋಲೀಸರು ಸಮಾಜದ ರಕ್ಷಣೆ ಮಾಡುವರು. ಸಮಾಜದಲ್ಲಿ ಶಾಂತಿಯನ್ನು ಕಾಪಾಡುವಲ್ಲಿ ಇವರ ಪಾತ್ರ ಪ್ರಮುಖವಾಗಿದೆ.

ಪೋಲೀಸರು ಕಳ್ಳರನ್ನು, ದರೋಡೆಕೋರರನ್ನು ಹಿಡಿದು ಶಿಕ್ಷಿಸುತ್ತಾರೆ. ದಂಗೆಗಳನ್ನು ನಿಯಂತ್ರಿಸುತ್ತಾರೆ. ಅನ್ಯಾಯವನ್ನು ತಡೆದು ಎಲ್ಲರಿಗೂ ನ್ಯಾಯವನ್ನು ಒದಗಿಸುವರು. ಅಮಾಯಕರನ್ನು ರಕ್ಷಿಸುವ ಕಾರ್ಯ ಮಾಡುತ್ತಾರೆ.

ಹಬ್ಬ-ಹರಿದಿನಗಳಲ್ಲಿ, ಜಾತ್ರೆಗಳಲ್ಲಿ ಇವರು ಹಗಲು-ರಾತ್ರಿ, ಹಸಿವು ನೀರಡಿಕೆಗಳೆನ್ನದೆ ಕೆಲಸ ಮಾಡುತ್ತಾರೆ.

ನಾವು ಪೋಲೀಸರಿಂದ ಶಿಸ್ತು, ಶಾಂತಿ, ಸಮಯದ ಮಹತ್ವ, ಧೈರ್ಯ ಮುಂತಾದ ಆದರ್ಶ ಗುಣಗಳನ್ನು ಕಲಿತುಕೊಳ್ಳಬೇಕು. ಅವರು ಮಾಡುವ ಈ ನಿತ್ಯ-ಸತ್ಯದ ಕಾರ್ಯಗಳಿಗೆ ನಮ್ಮದೊಂದು ನಮನ.



**ಕರ್ತವ್ಯವೇ ದೇವರು**



★ ಚಿತ್ರಗಳನ್ನು ನಿರೀಕ್ಷಿಸು, ಬಿಟ್ಟ ಸ್ಥಳದಲ್ಲಿ ಯೋಗ್ಯ ಮಾಹಿತಿ ಬರೆ



ಉದ್ಯೋಗದ ಹೆಸರು : ______________________

ಬೇಕಾಗುವ ಸಾಹಿತ್ಯಗಳು : ____________________

ಮಾಡುವ ಕೆಲಸ : ________________________



ಉದ್ಯೋಗದ ಹೆಸರು : ______________________

ಬೇಕಾಗುವ ಸಾಹಿತ್ಯಗಳು : ____________________

ಮಾಡುವ ಕೆಲಸ : ________________________



ಉದ್ಯೋಗದ ಹೆಸರು : ______________________

ಬೇಕಾಗುವ ಸಾಹಿತ್ಯಗಳು : ____________________

ಮಾಡುವ ಕೆಲಸ : ________________________



ಉದ್ಯೋಗದ ಹೆಸರು : ______________________

ಬೇಕಾಗುವ ಸಾಹಿತ್ಯಗಳು : ____________________

ಮಾಡುವ ಕೆಲಸ : ________________________



★ ಉದಾಹರಣೆಯಲ್ಲಿ ತೋರಿಸಿದಂತೆ ಶಬ್ದ ಬರೆ

| | | |
|---|---|---|
| ಉದಾ : ಹಗಲು | × | ರಾತ್ರಿ |
| ಬೆಳಕು | × | |
| | × | ಬಿಳಿ |
| ಮೇಲೆ | × | |
| | × | ಹೋಗು |
| ಸಮೀಪ | × | |

★ ಒಂದೇ ಶಬ್ದದಲ್ಲಿ ಉತ್ತರ ಬರೆ.

1. ಹೂವಿನಿಂದ ಹಾರ ತಯಾರಿಸುವವ
2. ಬಂಗಾರದ ಆಭರಣ ತಯಾರಿಸುವವ
3. ಹೊಲದಲ್ಲಿ ಉಳುಮೆ ಮಾಡುವವ
4. ಹಾಡುಗಳನ್ನು ಹಾಡುವವ
5. ವಾಹನ ನಡೆಸುವವ

★ ಚಿತ್ರ ನೋಡಿ ಉದಾಹರಣೆಯಲ್ಲಿ ತೋರಿಸಿದಂತೆ ವಾಕ್ಯ ಬರೆ.



ಉದಾ : ಗೊಂಬೆಯು ಮೇಜಿನ ಮೇಲೆ ಇದೆ

1) ..........................................................................................

2) ..........................................................................................

3) ..........................................................................................

4) ..........................................................................................

5) ..........................................................................................

# 11 ಕಡಿಯಬೇಡ ಕಾಡು

ಅರಣ್ಯ ನಾಡಿನ ಸಂಪತ್ತು
ಅದಕೆ ತಂದರೆ ಆಪತ್ತು
ದೇಶಕೆ ತಪ್ಪದು ವಿಪತ್ತು
ಇದುವೆ ಸತ್ಯ ಯಾವತ್ತು

ಕಡಿಮೆಯಾಗುವುದು ಮಳೆ
ಬಡವಾಗುವುದು ಹೊಳೆ
ಬರಡಾಗುವುದು ಇಳೆ
ಕುಸಿಯುವುದು ದೇಶದ ಬೆಳೆ

ಬದಲಾಗುವುದು ಹವಾಮಾನ
ಹದಗೆಡುವುದು ಜನಜೀವನ
ಮರೆಯಾಗುವುದು ಶಾಂತಿ ಸಮಾಧಾನ
ಧರೆಯಾಗುವುದು ಕಾಂತಿಹೀನ

- ಮ.ಸು. ಮನ್ನಾರ ಕೃಷ್ಣರಾವ್




**ತಿಳಿದುಕೊ....**

ಬೆಳೆದ ಹೆಮ್ಮರ ಕಡಿದು ನುಂಗುವ
ಕರುಣೆ ಇಲ್ಲದ ಕಟುಕರೆ
ನಮಗೆ ತಾಣವು ಇಲ್ಲದಾಗಿದೆ
ನಿಮ್ಮದುಂಟೇ ಈ ಧರೆ?

**ಕಾಡು ಬೆಳೆಸು ನಾಡು ಉಳಿಸು**




★ ವೃತ್ತದಲ್ಲಿರುವ ಅಕ್ಷರಗಳನ್ನು ಸೇರಿಸಿ ಪದ ರಚಿಸು




ಮಾದರಿ : ಮಳೆ

★ ವೃತ್ತದಲ್ಲಿ ಯೋಗ್ಯ ಅಕ್ಷರಗಳನ್ನು ತುಂಬಿ ಪದ ರಚಿಸು.




ಮಾದರಿ : ಸಂಪತ್ತು

★ ನಿನ್ನ ಸುತ್ತಲಿನ ಗಿಡ-ಮರಗಳ ಹೆಸರು ಬರೆ.

ಉದಾ : ಬೇವಿನ ಮರ

# 12 ನಮ್ಮ ಆಹಾರ



ಸಮೀರಾ : ರಘು, ನೀನು ನಿನ್ನೆ ಶಾಲೆಗೆ ಏಕೆ ಬಂದಿರಲಿಲ್ಲ?



ರಘು : ಅಯ್ಯೋ! ಅದೊಂದು ದೊಡ್ಡ ಕಥೆ.

ಸ್ವಾತಿ : ಏಕೆ? ಏನಾಯಿತು?

ರಘು : ನನಗೆ ತುಂಬಾ ಹೊಟ್ಟೆ ನೋವು, ವೈದ್ಯರ ಬಳಿಗೆ ಹೋಗಿದ್ದೆ.

ಮೈಕಲ್ : ಹೌದೇ! ನಿನ್ನ ಹೊಟ್ಟೆ ನೋವಿಗೆ ಕಾರಣವೇನು?

ರಘು : ನಾನು ಮೊನ್ನೆ ರಾತ್ರಿ ಬರ್ಗರ್, ಪಿಜ್ಜಾ ತಿಂದು ಕೋಲ್ಡ್ರಿಂಕ್ಸ್ ಕುಡಿದಿದ್ದೆ, ಅದರಿಂದಲೇ ಹೀಗಾಗಿದೆ ಎಂದು ವೈದ್ಯರು ಹೇಳಿದರು.

ಸ್ವಾತಿ : ಸತ್ಯವಾದ ಮಾತು, ಅವು ನಮ್ಮ ಆರೋಗ್ಯಕ್ಕೆ ಹಾನಿಕರ ಎಂದು ನಮ್ಮ ತಂದೆ ನನಗೆ ಆಗಾಗ ಹೇಳುತ್ತಿದ್ದರು.

ಸಮೀರಾ : ಹೌದು, ನಾವು ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಲು ಹಸಿರು ತರಕಾರಿ ಹಾಗೂ ತಾಜಾ ಹಣ್ಣುಗಳನ್ನು ಸೇವಿಸಬೇಕು. ಮನೆಯಲ್ಲಿ ತಯಾರಿಸಿದ ಆಹಾರವನ್ನೇ ಸೇವಿಸಬೇಕು.

ರಘು : ನನಗೆ ಈಗ ಅರ್ಥವಾಗಿದೆ. ಇನ್ನು ಮುಂದೆ ಎಲ್ಲ ತರದ ಕಾಯಿಪಲ್ಲೆ ಹಾಗೂ ಹಣ್ಣುಗಳನ್ನು ತಿನ್ನುತ್ತೇನೆ.

ಮೈಕಲ್ : ಹಾಲು ಕೂಡ ಆರೋಗ್ಯಕ್ಕೆ ಒಳ್ಳೆಯದು. ಅದರಂತೆ ಮೊಸರು, ಮಜ್ಜಿಗೆ, ಬೆಣ್ಣೆ, ತುಪ್ಪ ಸಹ ಸೇವಿಸಬೇಕು.

ಸ್ವಾತಿ : ಹೌದು, ಪ್ರತಿಯೊಂದು ಆಹಾರ ಪದಾರ್ಥಗಳಿಂದ ನಮಗೆ ಬೇರೆ ಬೇರೆ ಪ್ರಕಾರದ ಜೀವನ ಸತ್ವಗಳು ಸಿಗುತ್ತವೆ.

ಎಲ್ಲರೂ : ಸರಿ, ಸರಿ ಇಂದಿನಿಂದ ನಾವೆಲ್ಲ ಮನೆಯಲ್ಲೇ ತಯಾರಿಸಿದ ಸಮತೋಲ ಆಹಾರವನ್ನೇ ಸೇವಿಸಿ ಆರೋಗ್ಯವಂತರಾಗೋಣ.



**ಆರೋಗ್ಯವೇ ಭಾಗ್ಯ**



★ **ಕೆಳಗಿನ ಮಾತುಗಳನ್ನು ಯಾರು ಯಾರಿಗೆ ಹೇಳಿದರು**

i] ಅಯ್ಯೋ! ಅದೊಂದು ದೊಡ್ಡ ಕಥೆ.

ii] ಹಾಲು ಕೂಡಾ ಆರೋಗ್ಯಕ್ಕೆ ಒಳ್ಳೆಯದು.

iii] ಮನೆಯಲ್ಲಿ ತಯಾರಿಸಿದ ಆಹಾರವನ್ನೇ ಸೇವಿಸಬೇಕು.

★ **ಕೊಟ್ಟ ಪರ್ಯಾಯಗಳಿಂದ ಸರಿಯಾದ ಉತ್ತರವನ್ನು ಆರಿಸಿ ಬರೆ**

i] ರಘು ನಿನ್ನೆ ಶಾಲೆಗೆ ಬಂದಿರಲಿಲ್ಲ ಕಾರಣ .....................................
ಅ) ಊರಿಗೆ ಹೋಗಿದ್ದ ಬ) ಹೊಟ್ಟೆ ನೋವಿತ್ತು ಕ) ಹಬ್ಬವಿತ್ತು

ii] ಬರ್ಗರ್ ಹಾಗೂ ಕೋಲ್ಡ್ರಿಂಕ್ಸ್ ನಮ್ಮ ಆರೋಗ್ಯಕ್ಕೆ .............................
ಅ) ಹಾನಿಕರ ಬ) ಆರೋಗ್ಯಕರ ಕ) ರುಚಿಕರ

iii] ಸಮತೋಲ ಆಹಾರವನ್ನು ಸೇವಿಸಿ ನಾವೆಲ್ಲ..................................
ಅ) ದೊಡ್ಡವರಾಗೋಣ ಬ) ಸುಂದರರಾಗೋಣ ಕ) ಆರೋಗ್ಯವಂತರಾಗೋಣ

★ **ಚಿತ್ರ ನೋಡಿ ವಾಕ್ಯ ಸರಿಪಡಿಸಿ ಬರೆ.**



ಸಮೀರಾ ಬಾಳೆಹಣ್ಣನ್ನು ಕುಡಿಯುತ್ತಿದ್ದಾಳೆ.

ರಘು ಹಾಲನ್ನು ತಿನ್ನುತ್ತಿದ್ದಾನೆ.



# 13 ಹಣ್ಣುಗಳ ಬುಟ್ಟಿ





★ ಕೆಳಗಿನ ವಾಕ್ಯಗಳನ್ನು ಓದು

- ಸಮೀನಾಳ ಹತ್ತಿರ ಒಂದು ಸೇಬುಹಣ್ಣು ಇದೆ.



- ಮೈಕಲ್‌ನ ಹತ್ತಿರ ನಾಲ್ಕು ಮಾವಿನ ಹಣ್ಣುಗಳು ಇವೆ.



- ಪೂಜಾಳ ಹತ್ತಿರ ಕೆಲವು ಪೇರಲ ಹಣ್ಣುಗಳು ಇವೆ.



- ರಕ್ಷಿತಾಳ ಹತ್ತಿರ ಒಂದು ದ್ರಾಕ್ಷಿಯ ಗೊನೆ ಇದೆ.



## 14 ಅಭಿನಯಿಸು



**ನಾನು ಪಾರಿವಾಳ.**

ನಾನು ಆಕಾಶದಲ್ಲಿ ಹಾರಾಡಬಲ್ಲೆ.

ನನಗೆ ಕಾಳು ಎಂದರೆ ಬಹಳ ಇಷ್ಟ.

ಆದರೆ ನನಗೆ ನೀರಿನಲ್ಲಿ ಈಜಾಡಲು ಬರುವುದಿಲ್ಲ.

**ನಾನು ಬೆಕ್ಕು.**

ಎಲ್ಲರೂ ನನಗೆ ಮಿಕ್ಕಿ ಎಂದು ಕರೆಯುತ್ತಾರೆ.

ನಾನು ಮನೆಯಲ್ಲಿಯ ಇಲಿಗಳನ್ನು ಹಿಡಿಯುತ್ತೇನೆ.

ನನಗೆ ಹಾಲು ಎಂದರೆ ತುಂಬಾ ಇಷ್ಟ.

ವೇಗದಿಂದ ಓಡಬಲ್ಲೆ, ಗಿಡವನ್ನು ಏರಬಲ್ಲೆ.

ಆದರೆ ನನಗೆ ಆಕಾಶದಲ್ಲಿ ಹಾರಾಡಲು ಬರುವುದಿಲ್ಲ.



★ಇದೇ ತರಹ ಬೇರೆ ಬೇರೆ ಪ್ರಾಣಿ-ಪಕ್ಷಿಗಳ ಅಭಿನಯ ಮಾಡಿಸಿಕೊಳ್ಳಿರಿ.

# 15 ಬಣ್ಣದ ಲೋಕ



★ ಕಾಮನಬಿಲ್ಲಿನಲ್ಲಿಯ ಬಣ್ಣಗಳನ್ನು ತುಂಬಿ ಹೆಸರು ಬರೆ.

1 ______ 2 ______ 3 ______

4 ______ 5 ______ 6 ______

7 ______

★ ಚಿತ್ರಗಳನ್ನು ಗಮನಿಸಿ ಉದಾಹರಣೆಯಲ್ಲಿ ತೋರಿಸಿದಂತೆ ಪದಬಂಧದಲ್ಲಿಯ ಶಬ್ದಗಳಲ್ಲಿ ಬಣ್ಣ ತುಂಬು.

| | | | | | |
|---|---|---|---|---|---|
| ಎಡದಿಂದ ಬಲಕ್ಕೆ |  |  |  |  |  |

| | | | | | |
|---|---|---|---|---|---|
| ಮೇಲಿನಿಂದ ಕೆಳಕ್ಕೆ |  |  |  |  |  |

★ ಪದಬಂಧ ★

| | | | | | | |
|---|---|---|---|---|---|---|
| ಮಾ | ವು | ಬ | ದ | ನೆ | ಕಾ | ಯಿ |
| ಏ | ಗ | ಜ್ಜ | ರಿ | ಬೆ | ಳ್ಳ | ಳ್ಳಿ |
| ನ | ಸೇ | ದ್ರಾ | ಮೆಂ | ತೆ | ಸೊ | ಪ್ಪು |
| ಹ | ಬು | ಕ್ಷಿ | ಬಾ | ಈ | ರು | ಳ್ಳಿ |
| ಣ್ಣು | ಕಿ | ರು | ಳೆ | ಮೊ | ಸಂ | ಬಿ |
| ತೆಂ | ತ್ತ | ಚಿ | ಹ | ಟೊ | ಮೆ | ಟೊ |
| ಗು | ಳೆ | ಕ್ಕು | ಣ್ಣು | ಮೂ | ಲಂ | ಗಿ |



★ ಕೆಳಗಿನ ವಾಕ್ಯಗಳನ್ನು ಓದು, ಬಿಟ್ಟ ಸ್ಥಳ ತುಂಬು.







1) ಕಾಗೆಯ ಧ್ವನಿ ________ ಆಗಿದೆ.

2) ಕೋಗಿಲೆಯ ಧ್ವನಿ ________ ಆಗಿದೆ.





1) ಉಮಾ ________ ತ್ತಿದ್ದಾಳೆ.

2) ರವಿ ________ ತ್ತಿದ್ದಾನೆ.





1) ತೆಂಗಿನಮರ ________ ವಾಗಿದೆ.

2) ಪೇರಲ ಗಿಡ ________ ವಾಗಿದೆ.


1) ಪೇಢೆ ______ ಯಾಗಿದೆ.

2) ಹಾಗಲಕಾಯಿ ______ ಯಾಗಿದೆ.

1) ಆಯಿಸ್ಕ್ರೀಮ ______ ಗಿದೆ.


2) ಚಹಾ ______ ಯಾಗಿದೆ.

1) ಹತ್ತಿ ______ ವಾಗಿದೆ.

2) ಕಲ್ಲು ______ ವಾಗಿದೆ.

# 16 ಸುಂದರಪುರ



ಇದು ಸುಂದರಪುರ. ಇಲ್ಲಿ ಹಚ್ಚಹಸಿರಿನ ಹೊಲಗದ್ದೆಗಳಿವೆ. ತುಂಬಿ ಹರಿಯುವ ಕೆರೆ ಬಾವಿಗಳಿವೆ.

ಹತ್ತು ವರ್ಷಗಳ ಹಿಂದೆ ಈ ಊರು ಹೀಗೆ ಇರಲಿಲ್ಲ. ಮಳೆ-ಬೆಳೆ ಇಲ್ಲದೆ ಜನ ಪರದಾಡುತ್ತಿದ್ದರು. ಆಗ ಅವರೆಲ್ಲ ಸೇರಿ ಊರಿನಲ್ಲಿ ಸಾಕಷ್ಟು ಗಿಡ-ಮರಗಳನ್ನು ಬೆಳೆಸಿದರು. ಕೆರೆ ಬಾವಿಗಳನ್ನು ಸ್ವಚ್ಛಗೊಳಿಸಿದರು. ಮಳೆನೀರನ್ನು ಹಿಡಿದಿಡಲು ಇಂಗು ಗುಂಡಿಗಳನ್ನು ತೋಡಿದರು. ಆಧುನಿಕ ಕೃಷಿ ಪದ್ಧತಿಯನ್ನು ಅನುಸರಿಸಿ ಹನಿ ನೀರಾವರಿಯನ್ನು ಅಳವಡಿಸಿದರು.

ಇಂದು ಈ ಸುಂದರಪುರ ಹೆಸರಿಗೆ ತಕ್ಕಹಾಗೆ ಸುಂದರವಾಗಿದೆ. ಇದಕ್ಕೆ ಕಾರಣ ಊರಿನ ಜನರ ಬುದ್ಧಿವಂತಿಕೆ.

# ಸೋಮಪುರ



ಸುಂದರಪುರದ ಪಕ್ಕದ ಊರು ಸೋಮಪುರ. ನೀವು ನೋಡುತ್ತಿರುವಂತೆ ಈ ಊರಲ್ಲಿ ಕಾಲಕಾಲಕ್ಕೆ ಮಳೆ ಬಾರದೆ ಊರಲ್ಲಿ ಬರಗಾಲ ಎದ್ದು ಕಾಣುತ್ತಿದೆ.

ಇದ್ದ ಮರಗಳನ್ನು ಕಡಿದು ಹಾಕಿದ್ದಾರೆ. ಆದರಿಂದಾಗಿ ಊರಲ್ಲಿ ರಣರಣ ಬಿಸಿಲು, ಊರಲ್ಲಿ ಕೆರೆ-ಬಾವಿಗಳು ಒಣಗಿ ಕುಡಿಯುವ ನೀರಿಗೂ ಪರದಾಡುವಂತಾಗಿದೆ. ಹೊಲಗದ್ದೆಗಳು ಒಣಗಿ ನಿಂತಿವೆ.

ಇಷ್ಟೆಲ್ಲ ಸಂಕಟಗಳು ಬಂದಿದ್ದರೂ ಸೋಮಪುರದ ಜನರಿಗೆ ತಮ್ಮ ತಪ್ಪಿನ ಅರಿವೇ ಆಗುತ್ತಿಲ್ಲ. ಪ್ರಯತ್ನಪಟ್ಟು ತಮ್ಮ ಊರನ್ನು ಸುಂದರಪುರದಂತೆ ಮಾಡಲು ಪ್ರಯತ್ನಿಸದೆ ಸೋಮಪುರವನ್ನು ಸೋಮಾರಿಪುರವನ್ನಾಗಿ ಮಾಡಿದ್ದಾರೆ.



★ ಚಿತ್ರ ನಿರೀಕ್ಷಿಸು, ಬಿಟ್ಟಸ್ಥಳಗಳಲ್ಲಿ ಅಕ್ಷರ ಬರೆ



ಬಾ _



_ ಪಂಪ



_ ದಿ



ಆ _ ಕ _




_ ರೆ

★ ಸರಿಯಾದ ಚಿತ್ರಕ್ಕೆ ✓ ಹಾಗೂ ತಪ್ಪಾದ ಚಿತ್ರಕ್ಕೆ ✗ ಗುರುತಿಸು.













★ ಕೆಳಗಿನ ಚಿತ್ರಗಳನ್ನು ನಿರೀಕ್ಷಿಸಿ ಯೋಗ್ಯ ವ್ಯತ್ಯಾಸ ಹೇಳು.





# 17 ಸ್ನೇಹ ಸಮ್ಮೇಲನ




ಇದು ಸರಕಾರಿ ಕನ್ನಡ ಪ್ರಾಥಮಿಕ ಶಾಲೆ. ಇಂದು ಹಬ್ಬದ ವಾತಾವರಣ. ಎಲ್ಲ ಕಡೆ ಸಡಗರವೇ ಸಡಗರ. ಎಲ್ಲ ಮಕ್ಕಳು, ಶಿಕ್ಷಕರು, ಪಾಲಕರು ಸಂಭ್ರಮದಿಂದ ಅತ್ತಿತ್ತ ಓಡಾಡುತ್ತಿದ್ದಾರೆ. ಇದಕ್ಕೆಲ್ಲ ಕಾರಣ ಇಂದು ಈ ಶಾಲೆಯ ವಾರ್ಷಿಕ ಸ್ನೇಹ ಸಮ್ಮೇಲನ ಇದೆ.

ಶಾಲೆಯನ್ನು ತಳಿರು-ತೋರಣಗಳಿಂದ ಸಿಂಗರಿಸಲಾಗಿದೆ. ಸುಂದರ ರಂಗೋಲಿ ಬಿಡಿಸಲಾಗಿದೆ. ಮೈದಾನದಲ್ಲಿ ದೊಡ್ಡದಾದ ವೇದಿಕೆಯನ್ನು ತಯಾರಿಸಲಾಗಿದೆ. ಊರಿನ ಗಣ್ಯವ್ಯಕ್ತಿಗಳು ಕಾರ್ಯಕ್ರಮಕ್ಕೆ ಆಗಮಿಸುವರು. ತಮ್ಮ ಭಾಷಣದಲ್ಲಿ ಮಕ್ಕಳಿಗೆ ಮಾರ್ಗದರ್ಶನ ಮಾಡುವರು. ಬೇರೆ ಬೇರೆ ಸ್ಪರ್ಧೆಗಳಲ್ಲಿ ಗೆದ್ದ ಮಕ್ಕಳಿಗೆ ಬಹುಮಾನ ನೀಡುವರು.

ಆಟ-ಪಾಠಗಳಲ್ಲಿ ಮುಂದಿರುವ ಹಾಗೂ ಉತ್ತಮ ನಡವಳಿಕೆ ಇರುವ ಒಬ್ಬ ವಿದ್ಯಾರ್ಥಿಯನ್ನು **ಆದರ್ಶ ವಿದ್ಯಾರ್ಥಿ** ಎಂದು ಸತ್ಕರಿಸಲಾಗುವದು.

ಮಕ್ಕಳು ನೃತ್ಯ, ನಾಟಕ, ಏಕಪಾತ್ರ ಅಭಿನಯ, ಹಾಡು ಮುಂತಾದ ಕಲಾಗುಣಗಳನ್ನು ಪ್ರದರ್ಶಿಸಿ ನೆರೆದ ಜನರನ್ನು ಮನರಂಜಿಸುವರು.



★ ಕೆಳಗಿನ ಪ್ರಶ್ನೆಗಳ ಯೋಗ್ಯ ಪರ್ಯಾಯಕ್ಕೆ ಹೀಗೆ ◯ ಗುರುತು ಮಾಡು

1. ಸ್ನೇಹ ಸಮ್ಮೇಲನ ಯಾವ ಶಾಲೆಯಲ್ಲಿ ಇದೆ?
   - ಅ ಪ್ರಾಥಮಿಕ ಶಾಲೆ
   - ಆ ಮಾಧ್ಯಮಿಕ ಶಾಲೆ
   - ಇ ಪಾಠಶಾಲೆ
2. ಶಾಲೆಯನ್ನು ಹೇಗೆ ಸಿಂಗರಿಸಲಾಗಿದೆ?
   - ಅ ಪತಾಕೆಗಳಿಂದ
   - ಆ ತೆಂಗಿನ ಪೊರಕೆಗಳಿಂದ
   - ಇ ತಳಿರು-ತೋರಣಗಳಿಂದ

★ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸು

1) ಕಾರ್ಯಕ್ರಮಕ್ಕೆ ಯಾರು ಆಗಮಿಸುವರು?

_______________________________________________

_______________________________________________

2) ಯಾರನ್ನು ಆದರ್ಶ ವಿದ್ಯಾರ್ಥಿ ಎಂದು ಸತ್ಕರಿಸುವರು?

_______________________________________________

_______________________________________________

★ ಆವರಣದಿಂದ ಸೂಕ್ತ ಅಕ್ಷರ ಆರಿಸಿ ಬಿಟ್ಟ ಸ್ಥಳದಲ್ಲಿ ಬರೆ

| | |
|---|---|
| 1) ಶಾ.................. | (ಒ, ಲೆ, ಜೆ) |
| 2) .............ದಯ | (ಮೃ, ಫೃ, ಹೃ) |
| 3) ಹು................ಮೆ | (ಳ್ಳಿ, ಣ್ಣೆ, ಯ್ಯಿ) |
| 4) ಗೆ............. | (ಜ್ಜೆ, ಳ್ಳೆ, ರ್ರೆ) |
| 5) ಭ.............ನೆ | (ವ್ರ, ರ್ರ, ಜ್ರ) |
| 6) ಮ...........ಳು | (ಕ್ಕ, ಯ್ಯ, ರ್ರ) |

★ ಗುಂಪಿಗೆ ಸೇರದ ಅಕ್ಷರ ಸರಿಪಡಿಸಿ ಬರೆ

ಮಾದರಿ : ಬಾ, ಹಾ, ಶ, ಳಾ  ಶಾ

1) ಪ, ಮ, ರ, ಕಾ ______

2) ಪೆ, ಮೈ, ಜೈ, ಕೈ ______

3) ಖೊ, ರೊ, ಸೋ, ಬೊ ______

4) ಗೀ, ಚಿ, ತೀ, ದೀ ______

5) ಚಂ, ತಂ, ದ, ನಂ ______

★ ಚಿತ್ರ ನೋಡಿ ಹೆಸರು ಬರೆ









ಒಗ್ಗಟ್ಟಿನಲ್ಲಿ ಬಲವಿದೆ

# 18 ನನ್ನ ಬಯಕೆ



ಗುರುಗಳೊಡನೆ ಗಗನದಲ್ಲಿ
ಪಯಣ ಬೆಳೆಸುವೆ
ಗಗನ ನೌಕೆಯಲ್ಲಿ ಕುಳಿತು
ದೂರ ಹಾರುವೆ.

ಹಕ್ಕಿಯಂತೆ ಬಾನಿನಲ್ಲಿ
ತೇಲಿ ನಲಿಯುವೆ
ದೂರದಿಂದ ಧರೆಯ ಸೊಬಗು
ನೋಡಿ ತಣಿಯುವೆ.

ಚಂದ್ರನಲ್ಲಿ ಇರಲು ಒಂದು
ಮನೆಯ ಕಟ್ಟುವೆ
ಸೊಳ್ಳೆಕಾಟ ತಳ್ಳಿ ಸುಖದಿ
ನಿದ್ರೆ ಮಾಡುವೆ.

ಓದು ಬರಹ ಚಿಂತೆ ದೂಡಿ
ಕಾಲ ಕಳೆಯುವೆ
ಶುಕ್ರ, ಶನಿಯ ಚರಿತೆಯನ್ನು
ಅರಿತುಕೊಳ್ಳುವೆ

ಅಮ್ಮ ನಾನು ಇನ್ನು ಮೇಲೆ
ಬನದ ಊಟಕೆ
ಹೋಗಲಾರೆ ಧರೆಯ ಮೇಲೆ
ಇರುವ ತೋಟಕೆ

ಕೊಳಚೆ ನೀರು ಮಲಿನ ಹವೆಯು
ಧರೆಯು ಕೆಟ್ಟಿದೆ
ಹೆಚ್ಚುತ್ತಿರುವ ಜನತೆಯಿಂದ
ಭಾರವಾಗಿದೆ.

– ಪ.ಗು. ಸಿದ್ದಾಪೂರ



★ ಉದಾಹರಣೆಯಲ್ಲಿ ತೋರಿಸಿದಂತೆ ಪದ್ಯದಿಂದ ಆರಿಸಿ ಜೋಡಿ ಪದಗಳನ್ನು ಬರೆ.

ಉದಾ: ಬೆಳೆಸುವೆ – ಹಾರುವೆ


1) ನಲಿಯುವೆ ....................................

2) ಕಟ್ಟುವೆ ....................................

3) ಕಳೆಯುವೆ ....................................


4) ಊಟಕೆ ....................................

★ ಚೌಕಟ್ಟಿನಲ್ಲಿರುವ ಸಮಾನ ಅರ್ಥದ ಪದಗಳನ್ನು ಹೂವಿನಲ್ಲಿ ಬರೆ.





| |
|---|
| ಗಗನ, ಜಲ, ಗಾಳಿ, ತಾಯಿ, ಭೂಮಿ |

★ ಕೆಳಗಿನ ಚಿತ್ರ ನೋಡಿ ಹೆಸರು ಪೂರ್ಣ ಮಾಡು.



ರಾ..........ಟ



ಉ..........ಗ್ರ..........



..............ಬೋಟ

★ ಕೆಳಗೆ ಕೊಟ್ಟ ನವಿಲುಗರಿಯಿಂದ ಅಕ್ಷರಗಳನ್ನು ಆಯ್ದು ಶಬ್ದಗಳನ್ನು ರಚಿಸಿರಿ.




ಜನ ................ ................ ................ ................ ................

★ ಉದಾಹರಣೆಯಂತೆ ಬರೆಯಿರಿ.

ತಂದೆ – ತಾಯಿ

ಮಾವ – ....................................

ಚಿಕ್ಕಪ್ಪ – ....................................

ಮಗ – ....................................

ತಮ್ಮ – ....................................

# 19 ಇಲಿ ಮತ್ತು ಕಪ್ಪೆ



ಒಂದು  ಮತ್ತು  ಸ್ನೇಹಿತರಾಗಿದ್ದವು.  ಬಡಾಯಿ

ಯಾವಾಗಲೂ ತಾನು ಹಾಗೆ, ಹೀಗೆ ನನ್ನನ್ನು ಬಿಟ್ಟರೆ ಯಾರೂ ಇಲ್ಲ ಎಂದು ಹೇಳಿಕೊಳ್ಳುತ್ತಿತ್ತು. ಸದಾ ಅದರ

ಮಾತು ಕೇಳಿ ಬೇಸರವಾದರೂ  ಸ್ನೇಹದ ಕಾರಣದಿಂದ ಅದನ್ನೆಲ್ಲಾ ಸಹಿಸಿಕೊಂಡಿತ್ತು.

ಒಂದು ದಿನ  ದ ಬಳಿ ಬಂತು.  ನೀರಿನಿಂದ ಹೊರಗೆ ಬಂತು

“ಈ ನೀರಿನಲ್ಲಿ ಇದ್ದು ಬೇಸರವಾಗಿದೆ. ಈ ದಿನ ನಾವು ಬಯಲಿನಲ್ಲಿ ವಿಹಾರ ಮಾಡೋಣ”

“ಆಗಲಿ, ಅದಕ್ಕೇನಂತೆ ಬಾ ಎಂದಿತು.  ಆದರೆ ಒಂದು ಮಾತು ನೆಲದ ಮೇಲೆ ನೀನು

ನನಗಿಂತ ವೇಗವಾಗಿ ಹೋಗುತ್ತಿ. ನಾನು ನಿನ್ನನ್ನು ಹಿಂಬಾಲಿಸುವದು ಕಷ್ಟವಾಗುತ್ತದೆ. ಆದ್ದರಿಂದ ನನ್ನ

ಕಾಲಿಗೂ ನಿನ್ನ ಕಾಲಿಗೂ ಒಂದೇ ದಾರದಿಂದ ಕಟ್ಟಿಕೊಳ್ಳೋಣ” ಎಂದಿತು. ಇದಕ್ಕೆ 

ಒಪ್ಪಿಕೊಂಡಿತು. ಎರಡೂ ತಮ್ಮ ತಮ್ಮ ಕಾಲಿಗೆ ದಾರ ಕಟ್ಟಿಕೊಂಡು ಬಯಲಿನಲ್ಲಿ ವಿಹಾರ ಹೊರಟವು. ಸ್ವಲ್ಪ

ಹೊತ್ತು ಅಲ್ಲೆಲ್ಲಾ ಅಲೆದಾಡಿದವು. ಮತ್ತೆ ಅವು  ದ ಬಳಿ ಬಂದವು.

ದಾರ ಬಿಚ್ಚಿಕೊಳ್ಳುತ್ತೇನೆ, ಸ್ವಲ್ಪ ಇರು ಎಂದು  ಹೇಳುತ್ತಿದ್ದರೂ ಕೇಳದೆ 

ನೀರಿಗೆ ನೆಗೆಯಿತು. ಅದರೊಂದಿಗೆ ಇಲಿಯು  ಬಿತ್ತು. ನಾನು ಮುಳುಗುತ್ತಿರುವೆ

ಕಾಪಾಡು ಎಂದು  ಅರಚಿಕೊಂಡರೂ ಕೇಳದೆ  ನಗುತ್ತಿತ್ತು.

ಪಾಪ  ನೀರು ಕುಡಿದು ಸತ್ತು ನೀರಿನಲ್ಲಿ ತೇಲತೊಡಗಿತು.

ಆಗ ಆಕಾಶದಲ್ಲಿ ಹಾರುತ್ತಿದ್ದ  ನೀರಿನಲ್ಲಿ ತೇಲುತ್ತಿದ್ದ  ಕಾಣಿಸಿತು.

ಅದು ಸರ್ರನೆ ಇಳಿದು  ಯನ್ನು ಎತ್ತಿಕೊಂಡು ಹಾರಿತು. ದಾರ ಕಟ್ಟಿದ್ದರಿಂದ


ಅದರೊಂದಿಗೆ  ಯೂ ಮೇಲೆ ಹಾರಿ  ಗೆ ಆಹಾರವಾಯಿತು.



★ ಸರಿಯಾದ ಅಕ್ಷರ ಆರಿಸಿ ಬಿಟ್ಟ ಚೌಕಟ್ಟುಗಳನ್ನು ತುಂಬು

| | | | |
|---|---|---|---|
| ಆ | | ಳು | (ರ ಕ ಮ) |
| | ಗ | ರು | (ಜ ಟ ಲ) |
| ಮೊ | | ಳೆ | (ಸ ಅ ಡ) |
| ಚಿ | | ತೆ | (ತಾ ರ ಸಿ) |
| | ವಿ | ಲು | (ನ ಬಾ ವ) |
| ಕ | ರ | | (ನಾ ಗ ಡಿ) |

★ ಕೆಳಗೆ ತೋರಿಸಿದ ಉದಾಹರಣೆಯಂತೆ ವೃತ್ತದೊಳಗಿನ ಒತ್ತಕ್ಷರವನ್ನು ಬಳಸಿ ಪದ ರಚನೆ ಮಾಡು.




**ಉದಾಹರಣೆ :** ಇಕ್ಕಳಿಕೆ

1) ...............................................

2) ...............................................


3) ...............................................


4) ...............................................


5) ...............................................

**ಗುಣವಂತರ ಗೆಳೆತನ ಮಾಡು.**

# 20 ಈ ಪೆನ್ಸಿಲ್ ನಿನ್ನದೆ?




ಸುಜಯ
ಸಾಗರ ಈ ಪೆನ್ಸಿಲ್ ನಿನ್ನದೆ?
ನನ್ನದಲ್ಲ
ಸಾಗರ
ಇದು ಮೀರಾಳದಿರಬಹುದು.
ಮೀರಾ ಪೆನ್ಸಿಲ್ ಹುಡುಕುತ್ತಿದ್ದಾಳೆ.
ಸುಜಯ
ಮೀರಾ ಏನು ಹುಡುಕುತ್ತಿರುವೆ?
ಸುಜಯ
ನನ್ನ ಪೆನ್ಸಿಲ್ ಕಳೆದಿದೆ. ಅದನ್ನು ಹುಡುಕುತ್ತಿದ್ದೇನೆ.
ಮೀರಾ


ಮೀರಾ
ಹಾಗಾದರೆ ಈ ಪೆನ್ಸಿಲ್ ನಿನ್ನದೆ?
ಸುಜಯ
ಹಾಂ! ಹೌದು,
ಇದು ನನ್ನ ಪೆನ್ಸಿಲ್.
ಮೀರಾ
ಇದು ನಿನಗೆ ಎಲ್ಲಿ ಸಿಕ್ಕಿತು?
ಸುಜಯ
ನನಗೆ ಆಟದ
ಮೈದಾನದಲ್ಲಿ ಸಿಕ್ಕಿತು.
ಮೀರಾ
ಸುಜಯ ಇದು ನನ್ನ ಇಷ್ಟವಾದ ಪೆನ್ಸಿಲ್.
ಹುಡುಕಿ ಕೊಟ್ಟದ್ದಕ್ಕೆ ತುಂಬಾ ಧನ್ಯವಾದಗಳು.
ಸುಜಯ
ಇರಲಿ ಬಿಡು ಮೀರಾ.
ನಾವೆಲ್ಲರೂ ಸ್ನೇಹಿತರು.



# 21 ತಪ್ಪಿನ ಅರಿವು

ಕನಕಪುರ ಎಂಬ ಊರಿನಲ್ಲಿ ರಮೇಶ ಮತ್ತು ರೇವತಿ ಎಂಬ ದಂಪತಿ ಗಳಿದ್ದರು. ಅವರಿಗೆ ಇಬ್ಬರು ಮಕ್ಕಳಿದ್ದರು. ಹಿರಿಯವನು ರಾಜು. ಆತ ಎರಡನೆಯ ತರಗತಿಯಲ್ಲಿ ಓದುತ್ತಿದ್ದನು. ಚಿಕ್ಕವಳು ಸುಮತಿ. ಅವಳು ರಾಜುವಿನಿಗಿಂತ ಮೂರು ವರ್ಷ ಚಿಕ್ಕವಳು. ಆಕೆ ಅಂಗನವಾಡಿಗೆ ಹೋಗುತ್ತಿದ್ದಳು. ರಾಜು ಮತ್ತು ಸುಮತಿ ತುಂಬಾ ಬುದ್ಧಿವಂತರಾಗಿದ್ದರು. ಆದರೆ ಅಷ್ಟೇ ಹಠಮಾಡುತ್ತಿದ್ದರು.

ಒಂದು ದಿನ ಅಮ್ಮ ಜಾತ್ರೆಯಿಂದ ಎರಡು ಚೆಂಡುಗಳನ್ನು ತಂದಳು. ಅದರಲ್ಲಿ ಒಂದು ಕೆಂಪು ಬಣ್ಣದ್ದು, ಇನ್ನೊಂದು ಹಸಿರು ಬಣ್ಣದ್ದು. ರಾಜು ಕೆಂಪು ಬಣ್ಣದ ಚೆಂಡನ್ನು ತೆಗೆದುಕೊಂಡು ಆಡತೊಡಗಿದನು. ಸುಮತಿಗೂ ಕೆಂಪು ಬಣ್ಣದ ಚೆಂಡೇ ಇಷ್ಟವಾಯಿತು. ಅವಳು ತನಗೂ ಅದೇ ಚೆಂಡು ಬೇಕೆಂದು ಹಠಮಾಡಿ ಅಳತೊಡಗಿದಳು. ಅವಳು ಚೆಂಡನ್ನು ಕೊಡು ಎಂದು ಅಣ್ಣನಿಗೆ ಕೇಳಿದಳು. ಆದರೆ ಆತ ಕೊಡದೆ ಓಡಿಹೋದ. ಅವಳೂ ಬೆನ್ನಟ್ಟಿ ಓಡಿದಳು. ಇಬ್ಬರೂ ಮನೆತುಂಬಾ ಓಡಾಡ ತೊಡಗಿದರು. ಆಗ ಸುಮತಿ ಕಾಲಜಾರಿ ಕೆಳಗೆ ಬಿದ್ದಳು. ಅವಳ ತಲೆಗೆ ಪೆಟ್ಟಾಗಿತು. ಒಂದೇ ಸವನೆ ರಕ್ತ ಸುರಿಯತೊಡಗಿತು. ಬಿದ್ದ ಸಪ್ಪಳ ಕೇಳಿ ಅಮ್ಮ ಅಡುಗೆಮನೆಯಿಂದ ಓಡಿ ಬಂದಳು. ಸುಮತಿಯೆನ್ನು ಎಬ್ಬಿಸಿದಳು, ಸುರಿಯುತ್ತಿರುವ ರಕ್ತವನ್ನು ನೋಡಿ ಗಾಬರಿಯಾದಳು. ತಕ್ಷಣ ಅವಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋದಳು. ಚಿಕಿತ್ಸೆಯನ್ನು ಪಡೆದುಕೊಂಡು ಸುಮತಿಯನ್ನು ಮನೆಗೆ ಕರೆದುಕೊಂಡು ಬಂದರು. ಸುಮತಿ ರಾತ್ರಿಯಲ್ಲ ನೋವಿನಿಂದ ನರಳುತ್ತಿದ್ದಳು. ಅದನ್ನು ಕಂಡು ರಾಜುಕೂಡಾ ದು:ಖಿಸಿದನು.

ಮರುದಿನ ತಂದೆ ಮನೆಗೆ ಬರುವಾಗ ಸುಂದರ ಬಲೂನುಗಳನ್ನು ತಂದರು. ಅವುಗಳನ್ನು ರಾಜುನ ಕೈಯಲ್ಲಿ ಕೊಟ್ಟರು. ಆಗ ಅವನು ಸುಮತಿಗೆ ಮೊದಲು ತೆಗೆದುಕೊಳ್ಳಲು ಹೇಳಿದನು. ಏಕೆಂದರೆ ಅವನಿಗೆ ತಾನು ನಿನ್ನೆ ಮಾಡಿರುವ ತಪ್ಪಿನ ಅರಿವಾಗಿತ್ತು. ಇದನ್ನು ಕಂಡು ತಂದೆ-ತಾಯಿ ಸಂತಸಪಟ್ಟರು.



★ ಉದಾಹರಣೆಯಲ್ಲಿ ತೋರಿಸಿದಂತೆ ಚೌಕಟ್ಟು ಪೂರ್ಣಮಾಡು

| | |
|---|---|
| ಉದಾ : ಸುಮತಿ ರಾಜುನ | ತಂಗಿ |
| i) ರಾಜು ಸುಮತಿಯ | |
| ii) ರೇವತಿ ರಾಜುನ | |
| iii) ರಮೇಶ ಸುಮತಿಯ | |
| iv) ಸುಮತಿ ರಮೇಶ - ರೇವತಿಯರ | |
| v) ರಾಜು ರಮೇಶ - ರೇವತಿಯರ | |

★ ನಿಮ್ಮ ಮನೆಯಲ್ಲಿ ಇಂತಹ ಪ್ರಸಂಗಗಳು ಬಂದಿವೆಯೇ? ಆಗ ನೀವು ಏನು ಮಾಡುವಿರಿ?

★ ಉದಾಹರಣೆಯಲ್ಲಿ ತೋರಿಸಿದಂತೆ ಸರಿಯಾದ ಜೋಡಿಗಳನ್ನು ಹೊಂದಿಸಿ ಬರೆ.

| | |
|---|---|
| ಅಣ್ಣ | ತಾಯಿ |
| ತಂದೆ | ಮಗಳು |
| ಮಗ | ತಂಗಿ |
| ಅಕ್ಕ | ತಮ್ಮ |

★ ವರ್ತುಳಗಳಲ್ಲಿ ಸರಿಯಾದ ಉತ್ತರಗಳನ್ನು ತುಂಬು.

ಅಮ್ಮ ತಂದ ಚೆಂಡುಗಳ ಬಣ್ಣಗಳು.




ಚಿಕ್ಕ ಕುಟುಂಬ ಚೊಕ್ಕ ಕುಟುಂಬ

# ಓ ಗೆಳೆಯಾ

## ಹಾಡೋಣ

ಓ ಗೆಳೆಯಾ ಊದುವೆಯಾ? ಕೊಳಲು ಊದುವೆಯಾ?
ಹೌದು ಹೌದು ನಾನು ಊದುವೆನು, ಕೊಳಲು ಊದುವೆನು?
ಕೊಳಲು ಹೇಗೆ ಊದುವೆ ನೀ? ಊದುವೆ ನೀ?
ಕೂಹು-ಕೂಹು ಎಂದು ಊದುವೆನು, ಕೊಳಲು ಊದುವೆನು.

ಓ ಗೆಳೆಯಾ ನುಡಿಸುವೆಯಾ? ವೀಣೆ ನುಡಿಸುವೆಯಾ?
ಹೌದು ಹೌದು ನಾನು ನುಡಿಸುವೆನು, ವೀಣೆ ನುಡಿಸುವೆನು.
ವೀಣೆ ಹೇಗೆ ನುಡಿಸುವೆ ನೀ? ನುಡಿಸುವೆ ನೀ?
ತನನಂ ತನನಂ ನುಡಿಸುವೆನು, ವೀಣೆ ನುಡಿಸುವೆನು.

ಓ ಗೆಳೆಯಾ ಬಾರಿಸುವೆಯಾ? ತಬಲಾ ಬಾರಿಸುವೆಯಾ?
ಹೌದು, ಹೌದು ನಾನು ಬಾರಿಸುವೆ, ತಬಲಾ ಬಾರಿಸುವೆ.
ತಬಲಾ ಹೇಗೆ ಬಾರಿಸುವೆ ನೀ? ಬಾರಿಸುವೆ ನೀ?
ದಾ-ಧಿನ್ ದಾ-ಧಿನ್ ಬಾರಿಸುವೆ, ತಬಲಾ ಬಾರಿಸುವೆ.

ಓ ಗೆಳೆಯಾ ಊದುವೆಯಾ? ಸನಾದಿ ಊದುವೆಯಾ?
ಹೌದು ಹೌದು ನಾನು ಊದುವೆನು, ಸನಾದಿ ಊದುವೆನು
ಸನಾದಿ ಹೇಗೆ ಊದುವೇ ನೀ? ಊದುವೆ ನೀ?
ಪೀ ಪೀ ಪೀ ಎಂದು ಊದುವೆನು, ಸನಾದಿ ಊದುವೆನು.



★ ಕೆಳಗಿನ ಸಂಗೀತ ಸಾಧನಗಳನ್ನು ನಿರೀಕ್ಷಿಸಿ ಕಂಸಿನಲ್ಲಿಯ ಯೋಗ್ಯ ಧ್ವನಿ ಬರೆ.
(ಢಂ ಢಂ, ಧಾ ಧೀನ್ ಧಾ ಧೀನ್, ತನನಂ ತನನಂ, ಪೀ ಪೀ ಪೀ ಪೀ, ಢಣ ಢಣ)











★ ಸಂಗೀತ ಸಾಧನಗಳ ಪರಿಚಯ ಮಾಡಿಕೊ.




# इयत्ता १ ली ते ८ वी साठीची पाठ्यपुस्तक मंडळाची वैशिष्ट्यपूर्ण पुस्तके

- मुलांसाठीच्या संस्कार कथा
- बालगीते
- उपयुक्त असा मराठी भाषा शब्दार्थ संग्रह
- सर्वांच्या संग्रही असावी अशी पुस्तके
- स्फूर्तीगीत
- गीतमंजुषा
- निवडक कवी, लेखक यांच्या कथांनी युक्त पुस्तक















**पुस्तक मागणीसाठी www.ebalbharati.in, www.balbharati.in संकेतस्थळावर भेट द्या.**

**साहित्य पाठ्यपुस्तक मंडळाच्या विभागीय भांडारांमध्ये विक्रीसाठी उपलब्ध आहे.**

ebalbharati

विभागीय भांडारे संपर्क क्रमांक : पुणे - ☎ २५६५९४६५, कोल्हापूर- ☎ २४६८५७६, मुंबई (गोरेगाव) - ☎ २८७७१८४२, पनवेल - ☎ २७४६२६४६५, नाशिक - ☎ २३९१५११, औरंगाबाद - ☎ २३३२१७१, नागपूर - ☎ २५४७७१६/२५२३०७८, लातूर - ☎ २२०९३०, अमरावती - ☎ २५३०९६५

ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ - 411004.

बालभारती इयत्ता दुसरी (कन्नड़)

₹ 51.00

